1

# ಹೋರಾಡುವ ದೈತ್ಯರ ಕುರಿತು ಏಳು ಸತ್ಯಗಳು

## (1 ಸಮುವೇಲ 17)

ದಾವೀದ ಮತ್ತು ಗೊಲ್ಯಾತರ ಕತೆಯನ್ನು ನೀವು ಮೊದಲ ಬಾರಿಗೆ ಕೇಳಿದಾಗ ಎಷ್ಟು ಉತ್ತೇಜನಕಾರಿಯಾಗಿತ್ತು ಎಂದು ನೆನಪಿದೆಯಾ? ಬಹುಶಃ ನೀವು ಅದನ್ನು ಬಹಳ ಸಾರಿ ಕೇಳಿದ್ದರಿಂದ ಅದರ ಬಲವನ್ನು ಕಳಕೊಂಡಿರಬಹುದು. ಇದರ ಪಾಠವನ್ನು ಆನಂದಿಸಲು, ನೀವು ಈ ಕತೆಯನ್ನು ಮೊದಲ ಬಾರಿ ಕೇಳುತ್ತಿದ್ದೀರೆಂದು ನಟಿಸಿರಿ. ಹಾಗೆ ನೀವು ಮಾಡಬಹುದೋ? ಅದ್ಭುತ. ಬೈಬಲಿನಲ್ಲಿನ ಅತಿ ಸಾಹಸದ ಕತೆಯನ್ನು ಕಲಿಯೋಣ.[1]

1 ಸಮುವೇಲ 17 ಪ್ರಾರಂಭವಾಗುವಂತೆ, ಇಸ್ರಾಯೇಲ್ಯರು ಯುದ್ಧದಲ್ಲಿದ್ದರು: "ಫಿಲಿಷ್ಟಿಯರು ತಮ್ಮ ಸೇನೆಯನ್ನು ಸೇರಿಸಿದರು" (ವಚನ 1). ಫಿಲಿಷ್ಟಿಯರು ಮೇಡಿಟರೇನಿಯನ್ ಸಮುದ್ರದ ದ್ವೀಪಗಳಿಂದ ಪಾಲೆಸ್ತೀನಿಗೆ ಬಂದು ಕರಾವಳಿಯಲ್ಲಿ ರಾಷ್ಟ್ರ ಪಟ್ಟಣಗಳನ್ನು ಕಟ್ಟಿಸಿದರು. ಇಸ್ರಾಯೇಲ್ಯರಿಗೆ ಅವರು ಸದಾ ಒಂದು ಮುಳ್ಳಾಗಿದ್ದರು. ಈಗ ಅವರು ಇಸ್ರಾಯೇಲ್ಯರೊಂದಿಗೆ ಯುದ್ಧಕ್ಕೆ ಬಂದಿದ್ದರು.[2]

ವಚನ 1-3 ಘಟನೆಗೆ ವಾತಾವರಣವನ್ನು ಸೃಷ್ಟಿಸಿತು: ಅರಸನಾದ ಸೌಲ ಮತ್ತು ಅವನ ಸೇನೆಯು ಒಂದು ಬೆಟ್ಟದಲ್ಲಿ ಪಾಳೆಯ ಮಾಡಿದರು. ಫಿಲಿಷ್ಟಿಯರು ಅದರ ಎದುರಿಗಿನ ಬೆಟ್ಟದಲ್ಲಿ ನೆರೆದುಬಂದರು. ಇಬ್ಬರ ಮಧ್ಯದಲ್ಲಿ ಎಲ್ಲಾ ತಗ್ಗು ಇತ್ತು.[3] ಪ್ರತಿ ದಿನ ಬೆಳಿಗ್ಗೆ, ತಮ್ಮ ಯುದ್ಧ ವಸ್ತ್ರಗಳನ್ನು ಧರಿಸಿ, ಯುದ್ಧದ ಮಹಾ ಧ್ವನಿಯನ್ನು ಆರ್ಭಟಿಸುತ್ತಿದ್ದರು (17:20, 21). ಎರಡೂ ಸೇನೆಗಳು ಅವಮಾನಕಾರಿಯಾದ ಮಾತುಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು, ಆದರೆ ಯಾರೂ ಮೊದಲ ಹೆಜ್ಜೆಯನ್ನು ಇಡಲಿಲ್ಲ. ಕೊನೆಗೆ, ಫಿಲಿಷ್ಟಿಯರ ಮಧ್ಯದಲ್ಲಿ ಒಬ್ಬ ದೈತ್ಯನು, ಒಂದು ಉನ್ನತವಾದ ವ್ಯಕ್ತಿ, ಬಂದನು: "ಫಿಲಿಷ್ಟಿಯರ ಪಾಳೆಯದಿಂದ ಗತ್ ಊರಿನವನಾದ ಗೊಲ್ಯಾತನೆಂಬ ಒಬ್ಬ ರಣಶೂರನು ಹೊರಟುಬಂದನು; ಅವನು ಆರುವರೆ ಮೊಳ ಎತ್ತರವಾಗಿದ್ದನು" (17:4). ಆದರೆ ಸುಮಾರು ಒಂಬತ್ತುವರೆ ಅಡಿ ಎತ್ತರ![4] ಗೊಲ್ಯಾತನು ಪುರುಷರಿಗೆ ಸರಿ ಪ್ರಮಾಣದ ಅಳತೆಯವನಾಗಿದ್ದರೆ, ಅವನು ಸುಮಾರು 600 ರಿಂದ 700 ಪೌಂಡ್ ತೂಕವುಳ್ಳವನಾಗಿರುತ್ತಿದ್ದನು![5] ಅದು 600 ಪೌಂಡ್‌ಗಿಂತಲೂ ಹೆಚ್ಚು ತೂಕದ ಮಾಂಸ ಖಂಡವಾಗಿತ್ತು, ಕೊಬ್ಬಲ್ಲ. ಅವನು ತನ್ನ ಯೌವನ ಪ್ರಾಯದಿಂದಲೇ ಒಬ್ಬ ಯೋಧನಾಗಿದ್ದನು. ಅವನು ಯುದ್ಧ ಮಾಡಿ ನುರಿತನಾಗಿದ್ದನು (17:33).

ಅವನು ಸಂಪೂರ್ಣ ಶಸ್ತ್ರಸಜ್ಜಿತನಾಗಿದ್ದನು, ಶಿರಸ್ತ್ರಾಣವನ್ನೂ ಹಾಕಿಕೊಂಡಿದ್ದನು.[6] ಅವನ "ಪರೆಪರೆಯಾಗಿರುವ ಕವಚವು"[7] 125ರಿಂಥ 150 ಪೌಂಡ್ ತೂಕದ್ದಾಗಿತ್ತು![8] ಅವನ ಕೈಯಲ್ಲಿ ಬರ್ಜಿಯಿತ್ತು, ಮತ್ತು ಒಂದು ಈಟಿಯು (KJVಯಲ್ಲಿ ಖೇಟಕ ಎಂದು ಇದೆ) ಅವನ ಹೆಗಲ ಮೇಲೆ ತೂಗುತ್ತಿತ್ತು. ಬರ್ಜಿಯ ಹಿಂಡಿಕೆಯು ನೇಯಿಗಾರರ ಕುಂಟೆಯಷ್ಟು ಗಾತ್ರದ್ದಾಗಿತ್ತು ಸುಮಾರು 15 ರಿಂದ 20 ಪೌಂಡ್ ತೂಕದ್ದಾಗಿತ್ತು![9] (ಅವನು ಅದನ್ನು ಯಾರ ಕಡೆಗೂ ಎಸೆಯಲಿಕ್ಕಿಲ್ಲ; ಕೇವಲ ವೈರಿಯ ತಲೆಯ ಮೇಲೆ ಹಾಕಿಬಿಟ್ಟರೆ ಸಾಕು!) ಅವನ ಗುರಾ

ಣಿಯು ಎಷ್ಟು ದೊಡ್ಡದಿತ್ತೆಂದರೆ, ಅದನ್ನು ಅವನ ಮುಂದೆ ಹೊರಲು ಇನ್ನೊಬ್ಬ ಸೈನಿಕನು ಬೇಕಾಗಿದ್ದನು.

ಗೊಲ್ಯಾತನು ಎಲ್ಲಾ ತಗ್ಗಿನಲ್ಲಿ ದಾಪುಗಾಲು ಹಾಕುತ್ತಾ ಬಂದು, "ನಮ್ಮ ಒಬ್ಬ ಯೋಧ ನನ್ನು ನನ್ನ ಬಳಿಗೆ ಕಳುಹಿಸಿರಿ, ನಾವು ಯುದ್ಧ ಮಾಡುವೆವು!" ಎಂದು ಕೂಗುತ್ತಿದ್ದನು: "ಅವನು ನನ್ನೊಡನೆ ಯುದ್ಧ ಮಾಡಿ ನನ್ನನ್ನು ಸೋಲಿಸಿ ಕೊಂದರೆ, ನಮ್ಮವರು ನಿಮ್ಮ ಸೇವಕ ರಾಗುವರು; ನಾನು ಅವನನ್ನು ಸೋಲಿಸಿ ಕೊಂದರೆ ನೀವು ನಮ್ಮ ದಾಸರಾಗಿ ನಮ್ಮನ್ನು ಸೇವಿ ಸಬೇಕು" ಎಂದು ಸವಾಲು ಹಾಕಿದನು (17:9). ಇದನ್ನು "ಒಂಟಿ ಕಾಳಗದ ಸವಾಲು" ಎಂದು ಕರೆಯುತ್ತಾರೆ ಮತ್ತು ಯುದ್ಧದ ತಕರಾರುಗ ಳನ್ನು ಬಗೆಹರಿಸುವ ನ್ಯಾಯಯುತವಾದ ಮಾರ್ಗವಾಗಿತ್ತು. ಅದು ಕೆಟ್ಟ ವಿಚಾರವಲ್ಲ. ರಾಷ್ಟ್ರಗಳ ಮಧ್ಯ ಯುದ್ಧವು ಇನ್ನು ಮುಂದೆ ಆಗು ವಾಗ, ಎರಡೂ ನಾಯಕರು ತಾವು ಯುದ್ಧ ಮಾಡಿಕೊಂಡು ಉಳಿದವರನ್ನು ಬಿಟ್ಟುಬಿಡುವದು ಅನಿವಾರ್ಯವಾಗುತ್ತದೆ!

ವಚನ 11 ಪ್ರಕಾರ, "ಸೌಲನೂ ಎಲ್ಲಾ ಇಸ್ರಾಯೇಲ್ಯರೂ ಆ ಫಿಲಿಷ್ಟಿಯನ ಮಾತುಗಳನ್ನು ಕೇಳಿ ಬಹಳವಾಗಿ ಭಯಪಟ್ಟರು." ವಚನ 16ರ ಪ್ರಕಾರ, "ಆ ಫಿಲಿಷ್ಟಿಯನು ನಾಲ್ವತ್ತು ದಿವಸ ಹೊತ್ತಾರೆಯಲ್ಲಿಯೂ ಸಾಯಂಕಾಲದಲ್ಲಿಯೂ ಬಂದು ಬಂದು ಅದೇ ಪ್ರಕಾರ ಕೂಗುತ್ತಾ ನಿಲ್ಲುತ್ತಿದ್ದನು." ಗೊಲ್ಯಾತನು ದಿನಕ್ಕೆ ಎರಡಾವರ್ತಿ ಏಲಾ ತಗ್ಗಿಗೆ ಬಂದು ನಾಲ್ವತ್ತು ದಿನಗಳವರೆಗೆ ತನ್ನ ಸವಾಲನ್ನು ಹಾಕುತ್ತಿದ್ದನು; ಅಂದರೆ ಒಟ್ಟಾಗಿ ಎಂಬತ್ತು ಬಾರಿ. ಅವನು ಎಂಬತ್ತೊಂಬತ್ತನೇಯ ಬಾರಿ ಸವಾಲು ಹಾಕುವದಕ್ಕಿದ್ದನು.

ಒಂಭತ್ತುವರೆ ಅಡಿ ಎತ್ತರದ ದೈತ್ಯನನ್ನು ಎದುರಿಸುವದು ಭಯಾನಕವಾಗಿತ್ತು ... ಆದರೆ ನಮ್ಮ ಜೀವನದಲ್ಲಿಯೂ ದೈತ್ಯರು ಇದ್ದಾರೆ - ನಮ್ಮ ಜೀವನದಲ್ಲಿ ನಾವು ಮುಂದೆ ಸಾಗ ಬೇಕಾದರೆ, ಬೃಹದಾಕಾರವಾಗಿ ನಿಂತಿರುವ ಸಂಗತಿಗಳು, ನಾವು ಎದುರಿಸ ಬೇಕಾದವುಗಳು, ಜಯಿಸಬೇಕಾದ ತೊಂದರೆಗಳು. ಅದು ಕಾನೂನಿನ ಯುದ್ಧವಾಗಿರ ಬಹುದು, ಒಡೆಯನೊಡನೆಯ ಹೋರಾಟವಿರಬಹುದು, ದುಷ್ಟ ಅಭ್ಯಾಸವಿರಬಹುದು, ಸ್ವಾಧೀನ ಮಾಡಿಕೊಂಡಿರುವ ಶೋಧನೆಯಿರಬಹುದು, ಮುರಿದು ಹೋದ ಸಂಬಂಧವನ್ನು ಸರಿಪಡಿಸುತ್ತಿರಬಹುದು. ಅದು ವ್ಯಕ್ತಿಗಳು ಅಥವಾ ಒತ್ತಡವಿರಬಹುದು; ಅದು ಚಿಂತೆ ಮತ್ತು ಭಯದಲ್ಲಿ ಅಂತ್ಯವಾಗುತ್ತದೆ. ನೀವು ಒಂದು ವೇಳೆ ಯಾವ ದೈತ್ಯನನ್ನು ನಿಮ್ಮ ಜೀವಿತದಲ್ಲಿ ಇನ್ನೂ ಎದುರಿಸದಿದ್ದರೇ, ಒಂದಿಲ್ಲ ಒಂದು ಹಂತದಲ್ಲಿ ನೀವು ಎದುರಿಸುತ್ತೀರಿ ಎಂದು ನಾನು ಭರವಸೆಯಿಂದ ಹೇಳುತ್ತೇನೆ!

ನನಗೆ ದೈತ್ಯನೆಂದು ತೋರುವ ಸಂಗತಿಯು ನಿಮಗೆ ತೋರಲಿಕ್ಕಿಲ್ಲ, ಆದರೆ ಅದು ದೈತ್ಯನೇ ಸರಿ. ನಿಮಗೆ ದೈತ್ಯನೆಂದು ತೋರುವ ಸಂಗತಿ ನನಗೆ ದೈತ್ಯನೆಂದು ತೋರಲಿಕ್ಕಿಲ್ಲ, ಆದರೆ ಅದು ನಿಜವಾಗಿದೆ. ನಾವು ಪ್ರತಿಯೊಬ್ಬರೂ ನಮ್ಮದೇ ಆದ ವಿಶೇಷ ಶೋಧನೆಗ ಳಿಂದ ಹೋರಾಡುತ್ತೇವೆ ನಮ್ಮ ಜೀವನದಲ್ಲಿ ಈ ದೈತ್ಯರನ್ನು ದಿನನಿತ್ಯ ಎದುರಿಸುತ್ತೇವೆ ಮತ್ತು ಅವುಗಳು ನಿಜವಾಗಿಯೂ ಇವೆ! ಯಾರ ಜೀವನದಲ್ಲಿನ ದೈತ್ಯರನ್ನು ಹಗುರವಾಗಿ ತೆಗೆದುಕೊಳ್ಳಬೇಡಿರಿ.

ನಮ್ಮ ದಿಗಂತಗಳಲ್ಲಿ ಬೃಹದಾಕಾರವಾಗಿ ಬೆಳೆದು ನಿಲ್ಲುವ ಸವಾಲುಗಳು, ನಮ್ಮ ಮೊಣಕಾಲುಗಳನ್ನು ಬಲಹೀನ ಮಾಡುವ ಕಷ್ಟಗಳಲ್ಲಿ ಪ್ರತಿಯೊಬ್ಬರೂ ನಾವು ನಮ್ಮ ದೈತ್ಯರನ್ನು ಎದುರಿಸುತ್ತೇವೆ. ಜೀವನದ ಗೊಲ್ಯಾತರನ್ನು ಹೇಗೆ *ಸೋಲಿಸುತ್ತೇವೆ?* ಎನ್ನುವದೇ ಈಗಿನ ಪ್ರಶ್ನೆಯಾಗಿದೆ. 1 ಸಮುವೇಲ 17ರಲ್ಲಿ, ದೈತ್ಯರನ್ನು ಎದುರಿಸುವಾಗ ಬೇಕಾಗುವ ಏಳು ಸತ್ಯಗಳನ್ನು ಕಾಣುತ್ತೇವೆ, ಏಳು ಸತ್ಯಗಳು ನಮಗೆ ಜಯಕೊಡಲು ಸಹಾಯ ಮಾಡುತ್ತವೆ.

## I. ನೀವು ನಿರೀಕ್ಷಿಸದ ಸಮಯದಲ್ಲಿ ದೈತ್ಯರು ಕಾಣಿಸಿಕೊಳ್ಳುತ್ತಾರೆ (17:12-15, 17-23)

ಬೇತ್ಲೆಹೇಮಿನಲ್ಲಿ ದಾವೀದನು ತನ್ನ ಮನೆಯಲ್ಲಿದ್ದಾಗ, ಅವನ ಮೂವರು ಹಿರಿಯ ಸಹೋದರರು ಇಸ್ರಾಯೇಲಿನ ಸೇನೆಯಲ್ಲಿದ್ದರು. ಫಿಲಿಷ್ಟಿಯರೊಡನೆ ಯುದ್ಧ ಮಾಡುವದಕ್ಕಾಗಿ ಅವರು ಸೌಲನೊಡನೆ ಹೋಗಿದ್ದರು. ಹಿರಿಯ ಪುತ್ರರು ಯುದ್ಧಕ್ಕೆ ಹೋದಾಗ ಕಿರಿಯರು ಮನೆಯಲ್ಲಿದ್ದು ಕೆಲಸ ಮಾಡುವ ಪದ್ಧತಿಯಿತ್ತು. ಹತ್ತು ಮಕ್ಕ ಳಲ್ಲಿ ಚಿಕ್ಕವನಾದ ದಾವೀದನು ಮನೆಯ ಮಗುವಾಗಿದ್ದನು. ಅವನು ಇನ್ನೂ ಹದಿ ವಯಸ್ಸಿನವನಾಗಿದ್ದನು, ಇನ್ನೂ ಇಪ್ಪತ್ತು ವರ್ಷದವನಾಗಿರಲಿಲ್ಲ[10] ಅವನ ಹೆಚ್ಚಾದ ಸಮಯ ಕುರುಬರ ಹೊಲದಲ್ಲಿ ಕಳೆಯುತ್ತಿತ್ತು. ಯಾವಾಗಲಾದರೂ ಒಮ್ಮೆ ಅವನು ಸೌಲನ ಅರಮನೆಗೆ ತನ್ನ ಕಿನ್ನರಿಯನ್ನು ಅರಸನಿಗಾಗಿ ಬಾರಿಸುವದಕ್ಕಾಗಿ ಹೋಗುತ್ತಿ ದ್ದನು (17:15),[11] (ಹೋಲಿಸು 1 ಸಮುವೇಲ 16:23) ಆದರೆ ಕುರಿ ಕಾಯುವದು ಅವನ ದಿನ ನಿತ್ಯದ ಕೆಲಸವಾಗಿತ್ತು.

ಒಂದು ದಿನ ಇಷಯನು ದಾವೀದನಿಗೆ, "ನಿನ್ನ ಅಣ್ಣಂದಿರು ಹೋಗಿ ನಾಲ್ವತ್ತು ದಿನಗಳಾಯಿತು ಮತ್ತು ಅವರು ಹೇಗಿದ್ದಾರೆಂದು ನನಗೆ ಸಮಾಚಾರವಿಲ್ಲ, ನೀನು ಹೋಗಿ ಅವರನ್ನು ವಿಚಾರಿಕೊಂಡು ಬಾ. ಈ ಆಹಾರ ಪದಾರ್ಥಗಳನ್ನು ಅವರಿಗೆ ಕೊಡು; ಮತ್ತು ಅವರ ಸಮಾಚಾರವನ್ನು ತೆಗೆದು ಕೊಂಡು ಬಾ" ಎಂದನು. ಬೇತ್ಲೆಹೇಮು ಕೇವಲ ಹತ್ತರಿಂದ ಹದಿನೈದು ಮೈಲು ದೂರದಲ್ಲಿತ್ತು, ಆದರೆ ಒಂದು ತಿಂಗಳಿಗಿಂತ ಹೆಚ್ಚು ಮೂವರು ಸಹೋದರರಿಂದ ಯಾವ ಸಮಾಚಾರವೂ ಕುಟುಂಬದವರಿಗೆ ಇರಲಿಲ್ಲ. "ಅವರ ಸಮಾಚಾರ" (17:18) ಎಂಬ ವಾಕ್ಯವು ಮೂಲ ಭಾಷೆಯಲ್ಲಿ "ಅವರ ವಾಗ್ದಾನ" ಎಂದಿದೆ (KJV ನೋಡಿರಿ). ಅವರು ಸರಿಯಾಗಿದ್ದಾರೆಂದು ದಾವೀದನು ಅವರಿಂದ ಏನಾದರು ಗುರುತನ್ನು ತರಬೇಕು ಎಂದು ಸೂಚಿಸುತ್ತದೆ. "ದಾವೀದನು ಮರುದಿನ ಬೆಳಿಗ್ಗೆ ಎದ್ದು ಕಾಯುವವನಿಗೆ ಕುರಿಗಳನ್ನು ಒಪ್ಪಿಸಿ ತನ್ನ ತಂದೆಯಾದ ಇಷಯನು ಹೇಳಿದವುಗಳನ್ನು ತೆಗೆದುಕೊಂಡು ಹೋದನು" (17:20).

ಏಲಾ ತಗ್ಗಿನ ದಾರಿಯನ್ನು ದಾವೀದನು ಹಿಡಿದಾಗ, ನಾನು ನೆನೆಸುವ ಪ್ರಕಾರ ದೈತ್ಯನೊಡನೆ ಹೋರಾಡುವದು ಅವನ ಮನಸ್ಸಿನಲ್ಲಿ ಇರಲೇ ಇಲ್ಲ. ಬೇರೆ ಯಾವ ಮುಂಜಾವಿನಂತೆ ಆ ದಿನ ಬೆಳಕು ಹರಿದಿತ್ತು. ದಾವೀದನು ಉತ್ಸಾಹ ಭರಿತನಾಗಿದ್ದುದರಲ್ಲಿ ಯಾವ ಸಂಶಯವಿಲ್ಲ ಅವನು ತನ್ನ ಅಣ್ಣಂದಿರನ್ನು ನೋಡಲಿಕ್ಕಿದ್ದನು ಮತ್ತು ಯುದ್ಧವನ್ನು ನೋಡಲಿಕ್ಕಿದ್ದನು - ಆದರೆ ತನ್ನೆದುರು ಏನು ಬರುತ್ತದೆ ಅಥವಾ ದೈತ್ಯನನ್ನು ಭೇಟಿ ಯಾಗುವ ಯಾವ ಸುಳಿವೂ ಇರಲಿಲ್ಲ.

ದೈತ್ಯರು ನಿಮ್ಮ ಜೀವನದಲ್ಲಿ ಕಾಣಿಸಿಕೊಳ್ಳುವ ದಿನಗಳು ಬೇರೆ ಇನ್ನಿತರ ದಿನಗಳಂತೇ ಇರುತ್ತದೆ. ನೀವು ಎಚ್ಚರಗೊಳ್ಳುತ್ತೀರಿ. ನಿಮ್ಮ ದಿನದ ಕಾರ್ಯದಲ್ಲಿ ತೊಡಗುತ್ತೀರಿ. ಬಹುಶಃ ಅದು ಒಳ್ಳೇ ದಿನವಾಗಿರಬಹುದು, ಅಥವಾ ಅಷ್ಟು ಒಳ್ಳೇ ದಿನವಾಗಿರಲಿಕ್ಕಿಲ್ಲ, ಆದರೆ ನಿಮ್ಮ ಜೀವನದ ಇತರ ಸಾವಿರ ದಿನಗಳಂತೆ ಅದು ಆಗಿರುತ್ತದೆ. ನಂತರ ಒಂದು ಪತ್ರ ಟಪಾಲಿನಲ್ಲಿ ಬರುತ್ತದೆ ... ಅಥವಾ ಒಂದು ತಂತಿ ಸಂದೇಶ ಬರುತ್ತದೆ ... ಅಥವಾ ಫೋನ್ ಗಂಟೆ ಬಾರಿಸುತ್ತದೆ ... ಅಥವಾ ಯಾರೋ ನಿಮ್ಮ ಬಳಿ ಬರುತ್ತಾರೆ. ಬಹುಶಃ ನಿಮ್ಮನ್ನು ನಿಮ್ಮ ಯಜಮಾನನ ಕಛೇರಿಯೊಳಗೆ ಕರೆಯುತ್ತಾರೆ ... ಅಥವಾ ಯಾವುದೋ ಅಲ್ಪವಾದರೂ ಪುನಃ ಪುನಃ ತೊಂದರೆಕೊಡುತ್ತಿರುವ ವೈದ್ಯಕೀಯ ತೊಂದರೆಯನ್ನು ನೀಗಿಸಲು ನೀವು ವೈದ್ಯರ ಬಳಿಗೆ ಹೋಗುತ್ತೀರಿ ... ಅಥವಾ ನಿಮ್ಮ ಸಂಗಾತಿ, "ನಾವು ಸ್ವಲ್ಪ ಮಾತಾಡಬೇಕು" ಎಂದು ಹೇಳುತ್ತಾರೆ. ತಕ್ಷಣವೇ, ದೈತ್ಯನು ಬೃಹದಾಕಾರವಾಗಿ ನಿಂತುಕೊಳ್ಳುತ್ತಾನೆ.

ದಾವೀದನು ಏಲಾ ತಗ್ಗನ್ನು ತಲುಪಿದಾಗ, ಅವನು ತಾನು ತಂದ ಸಾಮಾಗ್ರಿಗಳನ್ನು

ಒಬ್ಬನ ಬಳಿಯಲ್ಲಿ ಬಿಟ್ಟು ತನ್ನ ಅಣ್ಣಂದಿರು ಹೇಗಿದ್ದಾರೆಂದು ವಿಚಾರಿಸುವದಕ್ಕೆ ಹೋದನು. ಅವರೊಡನೆ ಮಾತನಾಡುವಾಗ, "ಗತ್ ಊರಿನ ರಣವೀರನಾದ ಗೊಲ್ಯಾತನೆಂಬ ಆ ಫಿಲಿಷ್ಟಿಯನು ತನ್ನ ಸೈನ್ಯದಿಂದ ಹೊರಗೆ ಬಂದು ಮುಂಚಿನಂತೆಯೇ ಕೂಗಿದನು" (17:23). ವಚನ 10: "ಈ ಹೊತ್ತು ಇಸ್ರಾಯೇಲ್ ಸೈನ್ಯದವರನ್ನು ಹೀಯಾಳಿಸುತ್ತೇನೆ; ನನ್ನೊಡನೆ ಕಾಳಗಕ್ಕೆ ನಿಮ್ಮಲ್ಲಿಂದ ಒಬ್ಬ ಮನುಷ್ಯನನ್ನು ಕಳುಹಿಸಿರಿ ನೋಡೋಣ." ಗೊಲ್ಯಾತನ ಧ್ವನಿಯಲ್ಲಿನ ವ್ಯಂಗ್ಯವನ್ನು ಕಲ್ಪಿಸಿರಿ: "ನಾನು ಇದೇ ಸ್ಥಳದಲ್ಲಿ ನಿಂತು ನಾಲ್ವತ್ತು ದಿನಗಳಾಯಿತು! ಈ ಸವಾಲನ್ನು ಮಾಡುವದು ಇದು ಎಂಬತ್ತೊಂದನೇಯ ಬಾರಿ! ಇಸ್ರಾಯೇಲಿ ನಲ್ಲಿ ನನ್ನನ್ನು ಎದುರಿಸುವ ಧೈರ್ಯವುಳ್ಳವರು ಯಾರೂ ಇಲ್ಲವೋ?"

ವಚನ 23, "ದಾವೀದನು ಅವನ ಮಾತುಗಳನ್ನು ಕೇಳಿದನು [ಗೊಲ್ಯಾತನ ಮಾತುಗಳು]." ಒಬ್ಬ ದೈತ್ಯನು ತನ್ನ ಜೀವನದಲ್ಲಿ ಬಂದಿದ್ದಾನೆಂಬ ಅಂಶವನ್ನು ಅವನು ಅಲಕ್ಷ್ಯ ಮಾಡಲು ಸಾಧ್ಯವಾಗಲಿಲ್ಲ. ಗುರುತಿಸಿಕೊಳ್ಳಿರಿ: ಬೇಗನೆಯಾದರೂ ಅಥವಾ ತಡವಾದರೂ ನೀವು ನಿಮ್ಮ ದೈತ್ಯನನ್ನು ಎದುರಿಸಲೇಬೇಕು.

## II. ನಂಬಿಕೆಯಿಂದ ಅಥವಾ ಭಯದಿಂದ ನೀವು ನಿಮ್ಮ ದೈತ್ಯರನ್ನು ಎದುರಿಸಬಹುದು (17:24-27)

ನಮ್ಮ ಧ್ಯಾನ ಭಾಗವು ಸೈನಿಕರ ಭಯ ಮತ್ತು ದಾವೀದನ ನಂಬಿಕೆಯನ್ನು ಹೋಲಿಸುತ್ತದೆ. ವಚನ 11 ಹೇಳುತ್ತದೆ: "ಸೌಲನೂ ಎಲ್ಲಾ ಇಸ್ರಾಯೇಲ್ಯರೂ ಆ ಫಿಲಿಷ್ಟಿಯನ ಮಾತುಗಳನ್ನು ಕೇಳಿ ಬಹಳವಾಗಿ ಭಯಪಟ್ಟರು" ವಚನ 24 ಹೇಳುತ್ತದೆ. "ಇಸ್ರಾಯೇಲ್ಯರು ಅವನನ್ನು ನೋಡಿ ಬಹಳವಾಗಿ ಭಯಪಟ್ಟು ಅಲ್ಲಿಂದ ಓಡಿಹೋದರು."

ದಾವೀದನು ತನ್ನ ಅಣ್ಣಂದಿರ ಜೊತೆ ಮಾತಾಡುತ್ತಿರುವಾಗ, ಆ ದೈತ್ಯನು ಹೊರಬಂದನು ಮತ್ತು ತನ್ನ ಸವಾಲನ್ನು ಎಸೆದನು. ದಾವೀದನು ತನ್ನ ಕಿವಿಗಳನ್ನು ನಂಬಲಾಗಲಿಲ್ಲ! "ಫಿಲಿಷ್ಟಿಯನು ಏನು ಹೇಳಿದನೆಂದು ನೀವು ಕೇಳಿದಿರೋ?!" ಯಾರು ಉತ್ತರಿಸಲಿಲ್ಲ. ದಾವೀದನು ಸುತ್ತಲೂ ನೋಡಿದನು - ಅವನು ಒಬ್ಬೊಂಟಿಗನಾಗಿದ್ದನು. ಉಳಿದವರೆಲ್ಲರೂ ಸುಮಾರು ಐವತ್ತು ಅಡಿ ಅವನ ಹಿಂದೆ, ಸುರಕ್ಷಿತವಾದ ಸ್ಥಳದಲ್ಲಿದ್ದರು! "ಇಸ್ರಾಯೇಲ್ಯರು ಅವನನ್ನು ನೋಡಿ ಭಯಪಟ್ಟು ಅಲ್ಲಿಂದ *ಓಡಿಹೋದರು."* (ಒತ್ತಿ ಹೇಳದ್ದು ನನ್ನದು.)

ದಾವೀದನು ಸೇನೆಯು ಅಡಗಿಕೊಂಡ ಸ್ಥಳಕ್ಕೆ ಹೋದಾಗ, ಸೈನಿಕರು ಪರಿಸ್ಥಿತಿಯ ಕುರಿತು ಮಾತಾಡುತ್ತಿದ್ದರು. ದೈತ್ಯನೊಂದಿಗೆ ಯುದ್ಧ ಮಾಡಲು ಇನ್ನೂ ಯಾರೂ ಮುಂದೆ ಬರದ್ದರಿಂದ, ಸೌಲನು "ಪಾತ್ರೆಯನ್ನು ಸಿಹಿ ಮಾಡಿದನು." ಅವನು, "ಯಾವನು ಇವನನ್ನು ಕೊಲ್ಲುವನೋ, ಅಂಥವನಿಗೆ ಅರಸನು ಅಪಾರದ್ರವ್ಯದೊಡನೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವನು,[11] ಇದಲ್ಲದೇ ಅವನ ಕುಟುಂಬಕ್ಕೆ ಸರ್ವಮಾನ್ಯವನ್ನು ಕೊಡುವನು" ಎಂದು ಹೇಳಿದನು - ಅಂದರೆ ಕಂದಾಯಭಾರವಿರುವದಿಲ್ಲ ಮತ್ತು ಸಾರ್ವಜನಿಕ ಸೇವೆಯಿಂದ ಮುಕ್ತಿ.

ನಾವು ಸ್ವಲ್ಪ ನಿಂತುಕೊಂಡು ಈ ಪ್ರಶ್ನೆಯನ್ನು ಕೇಳೋಣ: ಇಸ್ರಾಯೇಲ್ಯರ ಬದಿಯಲ್ಲಿ ನಿಂತುಕೊಂಡಿದ್ದ ಎಲ್ಲಾ ಸೈನಿಕರಲ್ಲಿ, ದೈತ್ಯನನ್ನು ಎದುರಿಸಲು ಯಾರು ಸಮಂಜಸವಾದ ಆಯ್ಕೆಯಾಗಿದ್ದರು? ಇತರರ ತಲೆ ಮತ್ತು ಭುಜಕ್ಕಿಂತ ಎತ್ತರವಾಗಿದ್ದವರು - ದೈತ್ಯನ ಎತ್ತರಕ್ಕೆ ಸಮೀಪವಾಗಿದ್ದವರು ಯಾರು? ಸೌಲ ತಾನೇ (1 ಸಮುವೇಲ 10:23) - ಆದರೆ ಸೌಲನು ಭಯಪಟ್ಟನು (1 ಸಮುವೇಲ 17:11), ಆದುದರಿಂದ ಅವನು ಪ್ರೋತ್ಸಾಹ ಕಾಣಿಕೆಗಳನ್ನು ತನ್ನ ಜನರ ಮುಂದೆ ಇಟ್ಟು ಆಸೆ ತೋರಿಸಿದನು.

ನಾನು ನೆನೆಸುವ ಪ್ರಕಾರ ಈ ಆಕರ್ಷಕ ಕೊಡುಗೆಗಳು ದಾವೀದನ ತಲೆಯ

ಮೇಲೆ ನೇರವಾಗಿ ನೇತಾಡಿದವು. *ದೇವರ* ನಾಮವು ದೂಷಿಸಲ್ಪಟ್ಟದ್ದರಿಂದ ದಾವೀದನು ಅಸಮಧಾನಗೊಂಡನು. ದಾವೀದನಿಗೆ ಪ್ರತಿಫಲದ ಮೇಲೆ ಆಸಕ್ತಿಯಿರಲಿಲ್ಲ; ಬದಲಾಗಿ, ಅವನಿಗೆ ತನ್ನ ದೇವರ ಘನತೆಯ ಕುರಿತು ಕಳಕಳಿಯಿತ್ತು. ವಚನ 26ರ ಕೊನೇ ಭಾಗದಲ್ಲಿ ದಾವೀದನ ಮಾತನ್ನು ಗಮನಿಸಿರಿ: "*ಜೀವಸ್ವರೂಪನಾದ* ದೇವರ ಸೈನ್ಯವನ್ನು ಹೀಯಾಳಿಸುವದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು?" (ಒತ್ತಿ ಹೇಳಿದ್ದು ನನ್ನದು.)

ನಮಗೆಲ್ಲಾ ದಾವೀದನ ಹೃದಯ ಬೇಕು! ದಿನದಿಂದ - ದಿನಕ್ಕೆ ದೇವರ ನಾಮವು ದೂಷಣೆಗೊಳಗಾಗುವದನ್ನು ನಾವು ಕೇಳುತ್ತೇವೆ - ಮತ್ತು ಅದಕ್ಕೆ ಹೊಂದಿಕೊಂಡುಬಿಡುತ್ತೇವೆ. ನಾವು ಕಠಿಣ ಹೃದಯರಾಗುತ್ತೇವೆ ಮತ್ತು ಅದರ ಕುರಿತು ಆಲೋಚಿಸುವದಿಲ್ಲ. ದಾವೀದನು ಕೋಪಗೊಂಡನು! ಅವರು ಜೀವಿಸುವ ದೇವರನ್ನು ಅಪಮಾನಗೊಳಿಸುತ್ತಿದ್ದರು. "ಯಾರು ಯಾಕೆ ಏನನ್ನೂ ಇದರ ವಿಷಯದಲ್ಲಿ ಮಾಡುತ್ತಿಲ್ಲ?!"

ದೈತ್ಯರು ನಮ್ಮ ಜೀವನದಲ್ಲಿ ಬರುವಾಗ, ನಾವು ಭಯಪಡುವ ಸಾಧ್ಯತೆ ಇದೆ ಅಥವಾ ಅವುಗಳನ್ನು ದೇವರಲ್ಲಿನ ನಂಬಿಕೆಯಿಂದ ಎದುರಿಸಬಹುದು. ನಾವು ಅವುಗಳಿಂದ ಭಾವಪರವಶರಾಗಬಹುದು ಅಥವಾ ಅವುಗಳು ದೇವರ ನಾಮವನ್ನು ಮಹಿಮೆ ಪಡಿಸುವದಕ್ಕಾಗಿ ಇರುವ ಅವಕಾಶಗಳೆಂದು ತಿಳಿಯಬಹುದು.

## III. ನಿಮ್ಮನ್ನು ನಿರಾಶೆಗೊಳಿಸಲು ಯಾರಾದರೂ ಯಾವಾಗಲೂ ಇರುತ್ತಾರೆ (17:28-33)

ಒಬ್ಬ ವ್ಯಕ್ತಿಯ ಜೀವನದಲ್ಲಿ ತೊಂದರೆಗಳು ಬರುವಾಗ, ಸುತ್ತಲಿರುವ ಪ್ರತಿಯೊಬ್ಬರು ಆಧಾರ, ಸಹಾಯ ಮತ್ತು ಬಲಕೊಡುತ್ತಾರೆ ಎಂದು ನೀವು ನೆನೆಸಬಹುದು - ಆದರೆ ಅದು ಹಾಗಿರುವದಿಲ್ಲ. ಬದಲಾಗಿ ಯಾರಾದರೂ ಯಾವಾಗಲೂ "ನೀನು ಇದನ್ನು ಮಾಡಲಾರಿ. ಇದನ್ನು ಮಾಡುವದಕ್ಕೆ ಬೇಕಾದದ್ದು ನಿನ್ನಲಿಲ್ಲ. ನೀನು ಬಿಟ್ಟು ಬಿಡುವದು ಒಳ್ಳೇಯದು" ಎಂದು ಹೇಳುವದಕ್ಕೆ ಸಿದ್ಧರಾಗಿರುತ್ತಾರೆ.

ದೈತ್ಯನೊಂದಿಗೆ ಯುದ್ಧ ಮಾಡಬೇಕಾದ ಸಂಧರ್ಭ ಬಂದಾಗ, ದಾವೀದನ ತಂದೆಯು ಆಗಲೇ, *"ನೀನು ಬಹಳ ಚಿಕ್ಕವನು"* ಎಂದು ಹೇಳಿದ್ದರು. ಇಷಯನು ತನ್ನ ಹಿರಿಯ ಪುತ್ರರನ್ನು ಸೇನೆಯನ್ನು ಸೇರಿಕೊಳ್ಳುವಂತೆ ಕಳುಹಿಸಿದ್ದನು, ದಾವೀದನನ್ನಲ್ಲ.

ಈಗ ದಾವೀದನ ಸಹೋದರ ಹೇಳಿದ್ದು, *"ನೀನಿನ್ನೂ ಪ್ರಬುದ್ಧನು."*

> ದಾವೀದನು ಜನರ ಸಂಗಡ ಹೀಗೆ ಮಾತಾಡುತ್ತಿರುವದನ್ನು ಅವನ ಹಿರೀ ಅಣ್ಣನಾದ ಎಲೀಯಾಬನು ಕೇಳಿ ಕೋಪಗೊಂಡು - ನೀನು ಇಲ್ಲಿಗೆ ಬಂದ ದ್ದೇಕೆ? ಅಡವಿಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೊಪ್ಪಿಸಿ ಬಂದಿ?[12] ನಿನ್ನ ಸೊಕ್ಕು ತುಂಟತನವೂ ನನಗೆ ಗೊತ್ತಿದೆ; ನೀನು ಯುದ್ಧವನ್ನು ನೋಡುವದಕ್ಕೆ ಬಂದಿದ್ದೀ ಎಂದು ಅವನನ್ನು ಗದರಿಸಿದನು (17:28).

ಎಲೀಯಾಬನು ಯಾರೆಂದು ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಿರಿ. ಸಮುವೇಲನು ಮುಂದಿನ ಅರಸನನ್ನು ಅಭಿಷೇಕಿಸಲು ಬಂದಾಗ, ಮನೆಯೊಳಗೆ ಮೊದಲು ಬಂದವನು ಅವನು. ಸಮುವೇಲನು, "ಇವನೇ ಅವನು!" ಎಂದು ಆಲೋಚಿಸಿದ್ದನು. ಆದರೆ ದೇವರು ಸಮುವೇಲನ ಹೆಗಲ ಮೇಲೆ ಕೈಯಿಟ್ಟು, "ಇಲ್ಲ, ಇವನಲ್ಲ. ನಾನು ಮನುಷ್ಯರು ನೋಡುವಂತೆ ನೋಡುವದಿಲ್ಲ. ನಾನು ಹೃದಯವನ್ನು ನೋಡುತ್ತೇನೆ" (ನೋಡಿರಿ 1 ಸಮುವೇಲ 16:6, 7). ಎಲೀಯಾಬನು ಬದಿಗೆ ನಿಂತುಕೊಂಡು, ತನ್ನ ಚಿಕ್ಕ ಸಹೋದರ ದಾವೀದನ ತಲೇ

ಮೇಲೆ ಎಣ್ಣೆ ಹೊಯ್ಯಲ್ಪಡುವದನ್ನು ಗಮನಿಸಿದನು. ಹೊಟ್ಟೆಕಿಚ್ಚು ಈ ವ್ಯಕ್ತಿಯನ್ನು ತಿನ್ನುತಿತ್ತು. ದಾವೀದನ ಉದ್ದೇಶಗಳನ್ನು, ದಾವೀದನ ಕೆಲಸ, ದಾವೀದನ ಹೃದಯವನ್ನು ಅವನು ಅವಮಾನಗೊಳಿಸಿದನು.

ದಾವೀದನ ಸಹಜವಾದ ಪ್ರತಿಕ್ರಿಯೆಯು ತನ್ನ ಅಣ್ಣನೊಂದಿಗೆ ಜಗಳ ಮಾಡುವದಾಗಿತ್ತು. ನಿಮಗೆ ಸಹೋದರ ಸಹೋದರಿಯರಿದ್ದಾರೋ? ಅವರೊಂದಿಗೆ ನೀವು ಎಂದಾದರೂ ಜಗಳ ಮಾಡಿದ್ದೀರೋ? ನಮ್ಮ ಹಾಗೆ ದಾವೀದನಿದ್ದರೆ, ಎಲೀಯಾಬನೊಡನೆ ಮುಷ್ಠಿ ಯುದ್ಧದಲ್ಲಿ ತೊಡಗುತ್ತಿದ್ದನು. ನಾವು ದೈತ್ಯರನ್ನು ಎದುರಿಸುವಾಗ ಅನೇಕಾವರ್ತಿ ಹೀಗೆ ಇರುವದು. ದೈತ್ಯರನ್ನು ಎದುರಿಸುವದಕ್ಕೆ ನಮ್ಮ ಬಲವನ್ನು ಉಪಯೋಗಿಸದೇ, ನಾವು ಜನರನ್ನು ಎದುರಿಸುತ್ತೇವೆ. ನಾವು ಅಸಂತೋಷವುಳ್ಳವರೂ ಮತ್ತು ವಿಭಿನ್ನರೂ ಆಗುತ್ತೇವೆ, ಆದುದರಿಂದ ನಮ್ಮ ಸುತ್ತಲಿರುವವರ ಮೇಲೆ ಹರಿಹಾಯುತ್ತೇವೆ, ನಮ್ಮ ದೈತ್ಯರನ್ನು ಸೋಲಿಸುವದಕ್ಕೆ ಬೇಕಾಗಿರುವ ಬಲವನ್ನು ಅಲ್ಲಿ ಹಾಕುತ್ತೇವೆ.

ತನ್ನ ಸಹೋದರನೊಂದಿಗೆ ಬಹುಕಾಲದ ಜಗಳಕ್ಕೆ ದಾವೀದನು ಒಳಪಡಲು ಇಷ್ಟಪಡಲಿಲ್ಲ. ಅವನು, "ನಾನೇನು ತಪ್ಪು ಮಾಡಿದೆನು? ಬರೀ ಮಾತಾಡಿದೆನಷ್ಟೆ?" ಎಂದನು (ನೋಡಿರಿ 1 ಸಮುವೇಲ 17:29). ಅವನು ನಂತರ ತಿರುಗಿಕೊಂಡು ಇನ್ನೊಬ್ಬನೊಡನೆ ಮಾತಾಡಿದನು. ತಗ್ಗಿನಲ್ಲಿ ದೈತ್ಯನೊಬ್ಬನಿದ್ದಾಗ ಪಾಳೆಯದಲ್ಲಿ ಅವನು ಜಗಳ ಮಾಡಲು ಇಷ್ಟಪಡಲಿಲ್ಲ.[13]

ದಾವೀದನ ಪ್ರಶ್ನೆಗಳು ಸೌಲನ ಕಿವಿಗೆ ಬಿದ್ದವು, ಮತ್ತು ಸೌಲನು ದಾವೀದನನ್ನು ಕರೇ ಕಳುಹಿಸಿದನು. ದಾವೀದನು ಅರಸನಿಗೆ, "ಆ ಫಿಲಿಷ್ಟಿಯನ ನಿಮಿತ್ತವಾಗಿ ಯಾವನೂ ಎದೆಗೆಡಬಾರದು; ನಿನ್ನ ಸೇವಕನಾದ ನಾನು ಹೋಗಿ ಅವನೊಡನೆ ಯುದ್ಧ ಮಾಡುವೆನು" ಅಂದನು (17:32).

ಸೌಲನು ದಾವೀದನನ್ನು ನಿರಾಶೆಗೊಳಿಸಲು ನೋಡಿದನು. "ನೀನು ಅವನೊಡನೆ ಕಾದಾಡಲಾರಿ; ನೀನು ಇನ್ನೂ ಹುಡುಗನು. ಅವನಾದರೋ ಚಿಕ್ಕಂದಿನಿಂದಲೇ ಯುದ್ಧ ವೀರನು" (17:33).[14] "ನಿನಗೆ ಯುದ್ಧದ ಕುರಿತು ಏನು ತಿಳಿದಿದೆ? ನೀನು ಇನ್ನೂ ಚಿಕ್ಕವನು, ಕುರಿಗಳನ್ನು ಕಾಯುವವನು. ಈ ದೈತ್ಯನಾದರೋ, ಚಿಕ್ಕ ಹುಡುಗನಾಗಿದ್ದಾಗಿನಿಂದ ಯುದ್ಧಕ್ಕೆ ತರಬೇತಿ ಪಡೆಯುತ್ತಿದ್ದಾನೆ. *ಇಲ್ಲ, ನೀನು ತುಂಬಾ ಅನುಭವವಿಲ್ಲದವನು.*"

ಗೊಲ್ಯಾತನೊಂದಿಗೆ ಯುದ್ಧ ಮಾಡದಂತೆ ಪ್ರತಿಯೊಬ್ಬರೂ ಈ ಯೌವನಸ್ಥನನ್ನು ಧೈರ್ಯಗೆಡಿಸಿದರು. ಸ್ವಲ್ಪ ಸಮಯದಲ್ಲಿಯೇ ಆ ದೈತ್ಯನೂ ಕೂಡ, *"ನೀನು ಚಿಕ್ಕವನು! ನೀನು ಬಹು ಬಲಹೀನನು! ನಿನ್ನಲ್ಲಿ ಯುದ್ಧ ಸಾಧನಗಳಿಲ್ಲ!"* (ನೋಡಿರಿ 17:42, 43).

ನಿಮ್ಮ ದೈತ್ಯನನ್ನು ನೀವು ಎದುರಿಸುವಾಗ, ನೀವು ನಿರಾಶೆಗೊಳಿಸುವ ಮಾತುಗಳನ್ನು ಕೇಳುತ್ತೀರಿ. ಅದು ನಿಮ್ಮ ಕುಟುಂಬದವರಿಂದಲೇ ಇರಬಹುದು (ದಾವೀದನು ತನ್ನ ತಂದೆ ಮತ್ತು ಅಣ್ಣಂದಿರಿಂದ ನಿರಾಶೆಗೊಳಿಸಲ್ಪಟ್ಟಂತೆ). ನೀವು ಮಿತ್ರರೆಂದು ನೆನಸಿದವರಿಂದಲೇ ಇರಬಹುದು (ದಾವೀದನು ಸೌಲನಿಗಾಗಿ ತನ್ನ ಕಿನ್ನರಿಯನ್ನು ಆಗಾಗ್ಗೆ ಬಾರಿಸುತ್ತಿದ್ದನೆಂದು ನೆನಪಿಸಿಕೊಳ್ಳಿರಿ). ನಿಮ್ಮನ್ನು ಇಷ್ಟಪಡದವರಿಂದಲೇ ಇರಬಹುದು (ಗೊಲ್ಯಾತನಂತೆ ಇರುವವರು). ನೀವು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳ ಬಹುದು; ಅವರು ಬರುತ್ತಾರೆ. ನಿಮ್ಮ ಮನಸ್ಸನ್ನು ಅವರಿಗಾಗಿ ಸಿದ್ಧ ಮಾಡಿಕೊಳ್ಳಿರಿ ಮತ್ತು ಜನರು, "ನೀನು ಅದನ್ನು ಮಾಡಲಾರಿ!" ಎಂದು ಹೇಳಿದರೆ ಆಶ್ಚರ್ಯಪಡಬೇಡಿರಿ.

## IV. ನಿಮ್ಮ ದೈತ್ಯರನ್ನು ಭೇಟಿ ಮಾಡುವ ಮೊದಲು ನೀವು ಸಿದ್ಧರಾಗಬೇಕು (17:34-37)

"ನಾನು ಕಷ್ಟಗಳು ಬರುವತನಕ ಕಾಯುತ್ತೇನೆ, ನಂತರ ಅದನ್ನು ಎದುರಿಸುತ್ತೇನೆ,"

ಎಂದು ನೀವು ಆಲೋಚಿಸಿದರೆ, ನೀವು ಗೊಲ್ಯಾತನಂತೆ ಆಗುತ್ತೀರಿ, ನಿಮ್ಮ ಬೆನ್ನ ಮೇಲೆ ಬೀಳುತ್ತೀರಿ. ನೀವು ನಿಮ್ಮ ದೈತ್ಯನನ್ನು ಎದುರಿಸುವದಕ್ಕಿಂತ *ಮುಂಚೆ* ಸಿದ್ಧರಾಗಬೇಕು.

ದಾವೀದನು ಗೊಲ್ಯಾತನನ್ನು ಎದುರಿಸುವದಕ್ಕಿಂತ ಮುಂಚೆ, ಕುರಿಗಳನ್ನು ಪಾಲಿಸುವಾಗ ಸಿಂಹ ಮತ್ತು ಕರಡಿಗಳನ್ನು ಎದುರಿಸಲು ಸಿದ್ಧನಾಗಿದ್ದನು. ಸೌಲನು ದಾವೀದನನ್ನು ಧೈರ್ಯಗೆಡಿಸಿದಾಗ ದಾವೀದನು,

> ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ಸಿಂಹವಾಗಲಿ ಕರಡಿಯಾಗಲಿ ಬಂದು ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ನಾನು ಒಡನೆ ಅದನ್ನು ಬೆನ್ನಟ್ಟಿ ಹೊಡೆದು ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು ಹಿಂದಿರುಗಿ ನನ್ನ ಮೇಲೆ ಬಿದ್ದರೆ ಅದನ್ನು ಗದ್ದ ಹಿಡಿದು ಬಡಿದು ಕೊಂದುಹಾಕುತ್ತಿದ್ದೆನು. ನಿನ್ನ ಸೇವಕನಿಂದ ಕೊಲ್ಲಲ್ಪಟ್ಟ ಸಿಂಹಕ್ಕೂ ಕರಡಿಗೂ ಆದ ಗತಿಯೇ ಜೀವಸ್ವರೂಪನಾದ ದೇವರ ಸೈನ್ಯವನ್ನು ನಿಂದಿಸುವಂಥ ಈ ಸುನ್ನತಿಯಿಲ್ಲದ ಫಿಲಿಷ್ಟಿಯನಿಗೂ ಆಗಬೇಕು (17:34-36).

ದಾವೀದನು ಯುದ್ಧ ಭೂಮಿಯಲ್ಲಿ ನಿಂತು ಗೊಲ್ಯಾತನನ್ನು ಎದುರಿಸಲು ಸಿದ್ಧನಾಗಲಿಲ್ಲ. ಬದಲಾಗಿ, ಹುಲ್ಲುಗಾವಲುಗಳಲ್ಲಿ ಸಿದ್ಧನಾದನು. ಅವನು ಸಿಂಹಗಳನ್ನು ಮತ್ತು ಕರಡಿಗಳನ್ನು *ಎದುರಿಸಬೇಕಾಗಿರಲಿಲ್ಲ.* ಅವನು ಓಡಿ ಹೋದರೂ, ಕುರಿಗಳನ್ನು ಬಿಟ್ಟರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ - ಮತ್ತು ಅವುಗಳು ಯಾರಿಗೂ ಹೇಳುತ್ತಿರಲಿಲ್ಲ. ಈ ಭಯಾನಕ ಪ್ರಾಣಿಗಳನ್ನು ಎದುರಿಸಿದ್ದಕ್ಕೆ ಅವನಿಗೆ ಅಪಾಯಕಾರ - ಲಾಭಾಂಶ ದೊರಕಲಿಲ್ಲ. ಹತ್ತು ಗಂಟೆಯ ಸುದ್ದಿ ಸಮಾಚಾರದಲ್ಲಿ - "ಈ ದಿನದ ನಾಯಕ"ನೆಂದು ಅವನ ಚಿತ್ರ ಮೂಡಿಬರಲಿಲ್ಲ. ಕುರಿಗಳಿಂದ "ವಂದನೆಗಳು" ಕೂಡ ಸಿಕ್ಕಲಿಲ್ಲ (ಕುರಿಗಳು ತಮ್ಮ ಮೆಚ್ಚಿಗೆ ವ್ಯಕ್ತಪಡಿಸುವಲ್ಲಿ ಬಹು ಜಿಪುಣವಾಗಿರುತ್ತವೆ)! ಸಿಂಹಗಳನ್ನು ಮತ್ತು ಕರಡಿಗಳನ್ನು ಎದುರಿಸುವದು ಕುರುಬನ ಕೆಲಸದ ಜೊತೆ ಇರುವಂಥದು - ದಾವೀದನು ತನ್ನ ಕೆಲಸ ಮಾಡಿದನು.

ಜೀವನವನ್ನು ಎದುರಿಸುವ ಸಿದ್ಧತೆಯು ನಿಮ್ಮೊಳಗಿಂದ ಬರಬೇಕು. ನಿಮ್ಮ ಜೀವಿತದ ದೊಡ್ಡ ದೈತ್ಯರನ್ನು ಎದರಿಸುವದಕ್ಕೆ ಸಿದ್ಧರಾಗುವಂತೆ ನೀವು ಚಿಕ್ಕ ದೈತ್ಯರನ್ನು ಮೊದಲು ಎದುರಿಸಿರಿ. ನಿಮ್ಮ ಜೀವನದಲ್ಲಿನ ಚಿಕ್ಕ ಕಷ್ಟಗಳನ್ನು ಅಲಕ್ಷಿಸದೇ, ಅದನ್ನು ನೇರವಾಗಿ ಎದುರಿಸಿ ಮತ್ತು ದೇವರ ಸಹಾಯದಿಂದ ಅವುಗಳನ್ನು ಪರಿಹರಿಸಿದಾಗಲೇ ನೀವು ದೊಡ್ಡ ಕಷ್ಟಗಳನ್ನು ಎದುರಿಸಲು ಸಿದ್ಧರಾಗುತ್ತೀರಿ.

ಗೊಲ್ಯಾತನನ್ನು ಸಂಧಿಸಲು ದಾವೀದನು ಮಾಡಿದ ಬಹು ಪ್ರಾಮುಖ್ಯವಾದ ಸಿದ್ಧತೆಯು, ದೇವರೊಂದಿಗೆ ತನ್ನ ಸಂಬಂಧವನ್ನು ಬೆಳೆಸುವದು. ಸಿಂಹಗಳನ್ನು ಮತ್ತು ಕರಡಿಗಳನ್ನು ಕೊಲ್ಲುವದರ ಕುರಿತು ಅವನು ಮಾತಾಡುವಾಗ ಯಾರಿಗೆ ಮಹತ್ವ ಕೊಡುತ್ತಿದ್ದನೆಂದು ಸ್ವಲ್ಪ ಗಮನಿಸಿರಿ: "ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ *ಯೆಹೋವನು* ಈ ಫಿಲಿಷ್ಟಿಯನ ಕೈಗೂ ತಪ್ಪಿಸುವನು" (17:37ಎ; ಒತ್ತಿ ಹೇಳಿದ್ದು ನನ್ನದು). ದಾವೀದ ನು ದೇವರನ್ನು ನಂಬಿದನು! "ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ" (1 ಯೋಹಾನ 5:4).

ಸೌಲನ ಸೇನೆಯಲ್ಲಿನ ಜನರಿಗಿರದ ನಂಬಿಕೆಯನ್ನು ಈ ಹದಿವಯಸ್ಸಿನ ಹುಡುಗ ಹೇಗೆ ದೇವರಲ್ಲಿ ನಂಬಿಕೆಯನ್ನು ಬೆಳೆಸಿದನು? ಅವನ ಅಣ್ಣಂದಿರು ಮತ್ತು ಸೌಲನು ಬೆಳೆಸಿಕೊಳ್ಳಬಹುದಾದಂತೆ, ನಾವು ಪ್ರತಿಯೊಬ್ಬರೂ ನಮ್ಮ ನಂಬಿಕೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವಂತೆ, ದಾವೀದನು ತನ್ನ ನಂಬಿಕೆಯನ್ನು ಅಭಿವೃದ್ಧಿಗೊಳಿಸಿದನು. ಅವನು ದೇವರು ಮತ್ತು ದೇವರ ವಾಕ್ಯದ ಮೇಲೆ ಧ್ಯಾನ ಮಾಡಿದನು (ರೋಮಾ ಪುರ 10:17) - ಮತ್ತು ದೇವರು ಅವನಿಗೆ ಕೊಟ್ಟ ಎಲ್ಲಾ ಜಯದ ಮೇಲೆ ಧ್ಯಾನ ಮಾಡಿದನು.

ನಮ್ಮ ತೊಂದರೆ ಏನೆಂದರೆ, ಏನನ್ನು ಮರೆಯಬೇಕೋ ಅದನ್ನು ನೆನಪಿಟ್ಟುಕೊಳ್ಳುತ್ತೇವೆ ಮತ್ತು ಏನನ್ನು ನೆನಪಿಸಿಕೊಳ್ಳುತ್ತೇವೆ ಮತ್ತು ದೇವರು ನಮಗೆ ಕೊಟ್ಟ ಜಯವನ್ನು ಮರೆಯುತ್ತೇವೆ. ಸಿ. ಎಚ್. ಸ್ಪರ್ಜನ್ ಹೀಗೆ ಬರೆಯುತ್ತಾರೆ, "ನಾವು ನಮ್ಮ ಲಾಭಗಳನ್ನು ಧೂಳಿನಲ್ಲಿ ಬರೆಯುತ್ತೇವೆ ಮತ್ತು ನಮ್ಮ ಗಾಯಗಳನ್ನು ಸಂಗಮವರಿಕಲ್ಲುಗಳಲ್ಲಿ ... ನಾವು ನಮ್ಮ ಬಾಧೆಗಳನ್ನು ತಾಮ್ರದ ಮೇಲೆ ಕೆತ್ತುತ್ತೇವೆ, ದೇವರ ಬಿಡುಗಡೆಗಳ ದಾಖಲೆಗಳನ್ನು ನೀರಿನ ಮೇಲೆ ಬರೆಯುತ್ತೇವೆ."[15] ಒಂದು ವೇಳೆ, ಗತಕಾಲದ ಸೋಲುಗಳ ಮೇಲೆ ನೆಲೆಗೊಳ್ಳುವದರ ಬದಲಾಗಿ, ದೇವರು ನಮಗೆ ನಮ್ಮ ಕಷ್ಟಗಳನ್ನು ಎದುರಿಸಲು ಹೇಗೆ ಸದಾಕಾಲ ಸಹಾಯ ಮಾಡಿದ್ದಾನೆಂದು ನಾವು ನೆನೆಪಿಸಿಕೊಳ್ಳುವದಾದರೆ, ದೈತ್ಯರು ನಮ್ಮ ಜೀವನದಲ್ಲಿ ಆಹ್ವಾನಿಸಲ್ಪಡದೇ ಬರುವಾಗಲೂ ಅದನ್ನು ಎದುರಿಸಲು ಸಿದ್ಧರಾಗಿರುತ್ತೇವೆ.

## V. ಸಾಧ್ಯವಾದಷ್ಟು ಉತ್ತಮವಾಗಿ ಸಿದ್ಧರಾಗಿರಿ ಮತ್ತು ದೇವರ ಮೇಲೆ ಆಶ್ರಯಿಸಿರಿಕೊಳ್ಳಿರಿ (17:37-47)

ಸೌಲನು ಬಹಳ ಹತಾಶನಾಗಿರಬಹುದು; ಇಲ್ಲದಿದ್ದರೆ, ಒಬ್ಬ ದೈತ್ಯನೊಂದಿಗೆ ಯುದ್ಧ ಮಾಡಲು ಒಬ್ಬ ಬಾಲಕನಿಗೆ ಒಪ್ಪಿಸುವದಕ್ಕೆ ಬೇರೆ ಇನ್ಯಾವ ಕಾರಣವನ್ನು ನಾನು ಆಲೋಚಿಸಲಾರೆ.[16] ಸೌಲನು ದಾವೀದನಿಗೆ, "ಹೋಗು; ಯೆಹೋವನು ನಿನ್ನ ಸಂಗಡ ಇರಲಿ" (17:37ಬಿ). ಅರಸನಿಗೆ ನಂಬಿಕೆಯ ಭಾಷೆ ತಿಳಿದಿರುವದು ಆದರೆ ನಂಬಿಕೆಯ ಜೀವನವಲ್ಲ ಎನ್ನುವದು ಬಹು ವಿಪರ್ಯಾಸದ ಸಂಗತಿಯಲ್ಲವೇ (ಇದನ್ನು ನೋಡಿರಿ 1 ಸಮುವೇಲ 23:21)? ದಾವೀದನೊಂದಿಗೆ ದೇವರು ಇರುತ್ತಾನೆ ಮತ್ತು ಜಯವನ್ನು ಕೊಡುತ್ತಾನೆ ಎಂದು ಸೌಲನು ನಿಜವಾಗಿಯೂ ನಂಬಿದ್ದರೆ, ಸೌಲನೇ ಸ್ವತಃ ರಣರಂಗದಲ್ಲಿರುತ್ತಿದ್ದನು!

ತನ್ನ ಸುತ್ತಲಿರುವವರ ಅಪನಂಬಿಕೆಯ ಮಧ್ಯದಲ್ಲಿಯೂ ದಾವೀದನ ವಿಶ್ವಾಸವನ್ನು ನೋಡುವಾಗ ನಾವು ಪ್ರಭಾವಿತರಾಗುತ್ತೇವೆ. ದಾವೀದನಲ್ಲಿ ವಿಶ್ವಾಸವಿರುವದಕ್ಕೆ ಮೂರು ಕಾರಣಗಳಿದ್ದವು. ಮೊದಲನೇಯದು, ಅವನ *ತರಬೇತಿಯಿಂದಾಗಿ* ಅವನಲ್ಲಿ ವಿಶ್ವಾಸವಿತ್ತು, ಇದನ್ನು ನಾವು 17:38, 39 ನೋಡುತ್ತೇವೆ.

ಸೌಲನು ದಾವೀದನಿಗೆ ಯುದ್ಧ ವಸ್ತ್ರಗಳನ್ನು ತೊಡಿಸುವಾಗ ಈ ವಚನಗಳಲ್ಲಿ ಒಂದು ಹಾಸ್ಯದ ಘಟನೆ ಇದೆ. ಸೌಲನಿಗೆ ದಾವೀದನು ತನ್ನ ಶಸ್ತ್ರಾಸ್ತ್ರಗಳನ್ನು ಯಾಕೆ ತೊಡಿಸಬೇಕೆಂದಿದ್ದನು ಎಂದು ನಮಗೆ ಗೊತ್ತಿಲ್ಲ. ಬಹುಶಃ ಜಯದಲ್ಲಿ ತಾನು ಪಾಲು ತೆಗೆದುಕೊಳ್ಳಬೇಕೆಂಬ ನಿರೀಕ್ಷೆಯಿರಬಹುದು (ಒಬ್ಬರು ಹೇಳಿದ ಹಾಗೆ, "ಆ ಕರಡಿಯನ್ನು *ನನ್ನ* ಬಂದೂಕಿನಿಂದ ಕೊಂದನು"). ಕಾರಣವೇನೇ ಇರಬಹುದು,[17] ಶಸ್ತ್ರಾಸ್ತ್ರಗಳು ಅವನ ಮೇಲೆ ತೊಡಿಸಲ್ಪಟ್ಟವು - ಶಿರಸ್ತ್ರಾಣ, ಕತ್ತಿ ಮತ್ತು ಇತರ ಅಸ್ತ್ರಗಳು. ವಾಕ್ಯವು ಹೀಗೆ ಹೇಳುತ್ತದೆ, "ಅವನು *ನಡೆಯಬಹುದೋ* ಎಂದು ಪರೀಕ್ಷಿಸಿದ ಮಲೆ" (17:39ಎ; ಒತ್ತಿ ಹೇಳಿದ್ದು ನನ್ನದು). ದಾವೀದ 34 ಸಾಮಾನ್ಯ ಅಳತೆಯವನು, ಸೌಲನ 48 ಎತ್ತರದ ಅಳತೆಯಲ್ಲಿ, ಆಲೋಚಿಸಿರಿ! ಅವನು ಯುದ್ಧ ಮಾಡುವದಿರಲಿ, ನಡೆಯುವದಕ್ಕೂ ಆಗಲಿಲ್ಲ! ದಾವೀದನು ಯುದ್ಧ ವಸ್ತ್ರಗಳನ್ನು ತೆಗೆದು ಬಿಟ್ಟು, "ನನಗೆ ಅಭ್ಯಾಸವಿಲ್ಲದ್ದರಿಂದ ಇವುಗಳನ್ನು ಧರಿಸಿಕೊಂಡು ನಡೆಯಲಾರೆ" ಎಂದು ಹೇಳಿದನು (17:39ಬಿ).

ಬೇರೆ ಮಾತುಗಳಲ್ಲಿ ಹೇಳುವದಾದರೆ, "ನನಗೆ ಗೊತ್ತಿರುವವುಗಳಲ್ಲಿಯೇ ನಾನು ಸಿದ್ಧನು." ತಾನೇನು *ಮಾಡಬಲ್ಲನೋ* ಮತ್ತು ಹಿಂದೆ ಅವನ ಪರೀಕ್ಷೆಯಲ್ಲಿ ಜಯಕೊಟ್ಟದ್ದು ಯಾವದಿತ್ತೋ ಅದರಲ್ಲಿ ವಿಶ್ವಾಸವಿತ್ತು, ಅದು ಯಾವುದು? ಕವಣೆಯನ್ನು ತಿರುಗಿಸುವದು ಮತ್ತು ಕಲ್ಲನ್ನು ಕವಣೆಯೊಳಗಿಟ್ಟು ಎಸೆಯುವದು. ಈ ತನ್ನ ತರಬೇತಿಯಲ್ಲಿ ಅವನಿಗೆ ವಿಶ್ವಾಸವಿತ್ತು.

ಎರಡನೇಯದಾಗಿ: ದಾವೀದನಿಗೆ ತನ್ನ *ಸಾಮಾಗ್ರಿಗಳಲ್ಲಿ* ನಂಬಿಕೆಯಿತ್ತು. ಅವನ ಹತ್ತಿರ ಅವನ ಅದ್ಭುತವಾದ ಆಯುಧವಿರಲಿಲ್ಲ: ಅವನ ದೊಣ್ಣೆ[18] - ಸಿಂಹ ಮತ್ತು ಕರಡಿಯನ್ನು ಕೊಂದಿದ್ದ ದಪ್ಪನೆಯ ಬಡಿಗೆ (17:35, ಇದನ್ನು ನೋಡಿರಿ ಕೀರ್ತನೆ 23:4). ಅವನಲ್ಲಿ ಒಂದು ಕವಣೆಯಿತ್ತು (17:40).

ನಿಮಗೆ ಕವಣೆಯ ಪರಿಚಯವಿರಬಹುದು. "ಸೀಳು ಬಿಟ್ಟ" ಕೊಂಬೆಯಿಂದ, ಒಳ ಟ್ಯೂಬಿನಿಂದ ಕತ್ತರಿಸಿದ ಎರಡು ರಬ್ಬರಿನ ಎಳೆಯಿಂದ ಮತ್ತು ಹಳೆಯ ಪಾದರಕ್ಷೆಯ ಚರ್ಮದ ನಾಲಿಗೆಯಿಂದ ಇವುಗಳನ್ನು ನಾನು ಬಾಲಕನಾಗಿರುವಾಗ ಮಾಡುತ್ತಿದ್ದೆವು. ದಾವೀದನ "ಕೈಯಲ್ಲಿದದ್ದು" *ಅದಲ್ಲ.* ದಾವೀದನ ಕವಣೆಯು ಒಂದು ಚರ್ಮದ ಚೀಲ ವಾಗಿದ್ದು, ಎರಡೂ ಬದಿಗೆ ಉದ್ದನೆಯ ಚರ್ಮದ ಚಾಟಿ ಕಟ್ಟಲ್ಪಟ್ಟಿತ್ತು. ಕವಣೆಯನ್ನು ಉಪಯೋಗಿಸಲು, ಕಲ್ಲನ್ನು ಚೀಲದೊಳಗೆ ಹಾಕಬೇಕು, ಚಾಟಿಯ ತುದಿಗಳನ್ನು ಕೈಯಲ್ಲಿ ಹಿಡಿಯಬೇಕು, ಚೀಲವನ್ನು ತಿರುಗಿಸಬೇಕು, ನಂತರ ಒಂದು ಚಾಟಿಯನ್ನು ಸಡಿಲವಾಗಿ ಬಿಡಬೇಕು. ನಾನು ಚಿಕ್ಕವನಾಗಿರು ವಾಗ ಅನೇಕ ಬಾರಿ ಪಾದರಕ್ಷೆಯ ನಾಲಿಗೆಯಿಂದ ಮತ್ತು ಲೇಸುಗಳಿಂದ ಕವಣೆಯನ್ನು ಮಾಡಿ ಪ್ರಯತ್ನಿಸಿದ್ದೆನು. ನಾಲಿಗೆಯ ಮೇಲೆ ಚಿಕ್ಕ ಕಲ್ಲನ್ನು ಇಟ್ಟು, ಕವಣೆಯನ್ನು ನನ್ನ ತಲೆಯ ಮೇಲೆ ತಿರುಗಿಸಿ, ಒಂದು ತುದಿಯನ್ನು ಬಿಡುತ್ತಿದ್ದೆನು. ಕಲ್ಲು ಗುರಿಯುತ್ತ ಹಾರುತಿತ್ತು ... ಒಂದು ವೇಳೆ ವಿರುದ್ಧದಿಕ್ಕಿನಲ್ಲಿ ಹಾರದಿದ್ದರೇ ಅನೇಕ ವಸ್ತುಗಳನ್ನು ನಾನು ಒಡೆದು ಬಿಟ್ಟಿದ್ದರಿಂದ ನನ್ನ ತಾಯಿ ಅದನ್ನು ನಿಲ್ಲಿಸಬೇಕಾಯಿತು. ಅದು ಎಂದಿಗೂ ರಚಿಸಲ್ಪಟ್ಟ ಬಾರಿ ಆಯುಧ ವಾಗಿತ್ತು!

ಈ ಸ್ಥಿರವಲ್ಲದ ಆಯುಧವನ್ನು ಕೆಲವರು ಬಹು ನಿರ್ದಿಷ್ಟವಾಗಿ ಉಪಯೋಗಿ ಸುತ್ತಿದ್ದದ್ದು ಬಹು ಆಶ್ಚರ್ಯವಾಗಿದೆ. ನ್ಯಾಯಸ್ಥಾಪಕರು 20:15, 16 ಏಳು ನೂರು ಎಡಚರಾದ ಬೆನ್ಯಾಮೀನರ ಕುರಿತು ನಮೂದಿಸುತ್ತದೆ, "ಅವರಲ್ಲಿ ಪ್ರತಿಯೊಬ್ಬನೂ ಕೂದಲೆಳೆಯಷ್ಟು ಗುರಿ ತಪ್ಪದ ಹಾಗೆ ಕವಣೆಯನ್ನು ಹೊಡಿಯುವದರಲ್ಲಿ ನಿಪುಣನು!" ರಾಯ್ ಆಸ್ಬೋರ್ನ್ ಅವರು ಒಮ್ಮೆ ಪಾಲೆಸ್ತೀನ ದೇಶವನ್ನು ಭೇಟಿ ಮಾಡಿದರು.[19] ಒಬ್ಬ ಯೌವನಸ್ಥ ಕುರುಬನು ಒಂದು ಬೆಟ್ಟದ ತಪ್ಪಲಿನ ನೆರಳಿನಲ್ಲಿ ಕುಳಿತುಕೊಂಡಿದ್ದನ್ನು ಕಂಡರು. ಅವನ ಆಡುಗಳು ಸುಮಾರು ನೂರು ಯಾರ್ಡ್‌ನಷ್ಟು ದೂರದಲ್ಲಿದ್ದವು. ಆ ಹುಡುಗನು ತನ್ನ ಹಿಂಡನ್ನು ಕವಣೆಯಿಂದ ಕಾಯುತ್ತಿದ್ದನು. ಒಂದು ಆಡು ಅಲೆದಾಡು ವಾಗ, ಅದು ತಿರುಗಿ ಹಿಂಡಿನಲ್ಲಿ ಬರುವಂತೆ ಈ ಯೌವನಸ್ಥನು ಒಂದು ಕಲ್ಲನ್ನು ಅದರ ಎದುರು ಎಸೆಯುತ್ತಿದ್ದನು. ರಾಯ್ ಅವರು ಆ ಹುಡುಗನ ಬಳಿ ಬಂದು, ದೂರದಲ್ಲಿದ್ದ ಅಂಜೂರದ ಮರವನ್ನು ತೋರಿಸಿದರು ಮತ್ತು ಅದಕ್ಕೆ ಕಲ್ಲೆಸೆಯಬಹುದೋ ಎಂದು ಪ್ರಶ್ನಿಸಿದರು. ಆ ಹುಡುಗನು ಕಲ್ಲನ್ನು ಕವಣೆಯೊಳಗಿಟ್ಟು ಅದು ಮಸುಕಾಗಿ ಕಾಣುವಷ್ಟು ವೇಗವಾಗಿ ಬೀಸಿದನು. ಹುಡುಗನು ಅದನ್ನು ನಂತರ ಬಿಟ್ಟನು - ಆ ಕಲ್ಲು ಆ ಮರದ ಕಾಂಡದ ಮಧ್ಯದಲ್ಲಿ ಆಳವಾಗಿ ಸಿಕ್ಕಿಕೊಂಡಿತು.

ದಾವೀದನು ಅಂಥ ನೈಪುಣ್ಯವನ್ನು ಬೆಳೆಸಿಕೊಂಡಿದ್ದನು. "ತನ್ನ ಕೋಲನ್ನು ತೆಗೆದುಕೊಂಡು ಹೊರಟು ಹಳ್ಳದಲ್ಲಿ ಐದು ನುಣುಪುಕಲ್ಲುಗಳನ್ನು[20] ಆರಿಸಿಕೊಂಡು ಅವುಗಳನ್ನು ಕುರುಬರ ಪದ್ಧತಿಯಂತೆ ತನಗಿರುವ ಸೊಂಟಚೀಲದಲ್ಲಿ ಹಾಕಿ ಕೈಯಲ್ಲಿ ಕವಣೆಯನ್ನು ಹಿಡಿದು ಫಿಲಿಷ್ಟಿಯನ ಬಳಿಗೆ ಹೋದನು" (17:40ಎ). ಯಾವ ಆಯುಧವಿಲ್ಲ, ಕೇವಲ ಅವನ ಕೋಲು. ಕಣಿವೆಯ ಮಧ್ಯದಲ್ಲಿ ಹಳ್ಳದ ಹತ್ತಿರ ಬಂದಾಗ, ಐದು ನುಣುಪು ಕಲ್ಲುಗಳನ್ನು ಆರಿಸಿಕೊಂಡನು. ಕೈಗೆ ಸಿಕ್ಕ ಐದು ಕಲ್ಲುಗಳನ್ನು ಸುಮ್ಮನೇ ಆರಿಸಿಕೊಳ್ಳದೇ, ಅವನು ಆಯ್ಕೆ ಮಾಡಿದ್ದನ್ನು ಗಮನಿಸಿರಿ. ಅವನು ಒಂದು ಕಲ್ಲನ್ನು ಎತ್ತಿಕೊಂಡನು. "ಇಲ್ಲ. ಇದು ನಡೆಯುವದಿಲ್ಲ" ಅದನ್ನು ಬದಿಗೆಸೆದನು. ಇನ್ನೊಂದನ್ನು ಎತ್ತಿಕೊಂಡನು "ಆಗಬಹುದು" ಅದನ್ನು ಇಟ್ಟು ಕೊಂಡು ಇನ್ನೊಂದು ಸರಿಯಾದದ್ದನ್ನು ಹುಡುಕತೊಡಗಿದನು. ಬಹು ಎಚ್ಚರಿಕೆಯಿಂದ ತನಗೆ ಬೇಕಾದದ್ದನ್ನೆ ಒಂದು, ಎರಡು, ಮೂರು, ನಾಲ್ಕು, ಐದು ಕಲ್ಲುಗಳನ್ನು

ಆರಿಸಿಕೊಂಡನು. ಅವನ ಬಳಿಯಲ್ಲಿ ಚಿಕ್ಕದಾದ ಕುರುಬನ ಚೀಲವಿತ್ತು. ಅದರಲ್ಲಿ ಅವನ ಊಟವಿರುತ್ತಿತ್ತು. ಆದರೆ ಇವತ್ತು ಅವನು ತನ್ನ ಐದು ಕಲ್ಲುಗಳನ್ನು ಅದರಲ್ಲಿ ಹಾಕಿದನು ಮತ್ತು ದೈತ್ಯನನ್ನು ಎದುರಿಸಲು ಸಿದ್ಧನಾದನು.

ಎರಡೂ ಸೇನೆಗಳ ಕಣ್ಣುಗಳು ಹಳ್ಳದಲ್ಲಿ ಇಳಿದು ಕಲ್ಲುಗಳನ್ನು ಹೊಕ್ಕಿಕೊಳ್ಳುತ್ತಿದ್ದ ಈ ಹುಡುಗನು ಮೇಲೆ ಇರುವಾಗ[21] ಈ ಕಾಳಗಕ್ಕೆ ಜನರು ಎಷ್ಟು ಬೆಲೆ ಕಟ್ಟಬಹುದು? ನೀವೇ ಆಲೋಚಿಸಿರಿ. ಆ ದೈತ್ಯನೆಡೆಗೆ ತನ್ನ ಬದಿ ಕಲ್ಲುಗಳನ್ನು ತೆಗೆದುಕೊಂಡು ಹೋಗು ವಾಗ, "ಹಣ" ಎಲ್ಲಿರಬಹುದು?

ದಾವೀದನು ವಿಶ್ವಾಸದಿಂದ ಹೆಜ್ಜೆ ಹಾಕತೊಡಗಿದಾಗ, ಅದು ಕೇವಲ ಅವನ ತರಬೇತಿ ಮತ್ತು ಅವನ ಆಯುಧಗಳಿಂದಾಗಿ ಇರಲಿಲ್ಲ. ಅವನು ಮೂಲವಾಗಿ ವಿಶ್ವಾಸದಿಂದ ಇದ್ದದ್ದು *ಅವನ ನಂಬಿಕೆಯಿಂದಾಗಿ.* ಅವನು ದೇವರ ಮೇಲೆ ಅವಲಂಭಿಸಿದನು.

ವಚನ 40 ಮತ್ತು 41 ಕಾಳಗದಲ್ಲಿ ತೊಡಗಿದ ಇಬ್ಬರ ಮಧ್ಯದ ವ್ಯತ್ಯಾಸವನ್ನು ಎತ್ತಿ ತೋರಿ ಸುತ್ತದೆ: "ಅವನ ಕವಣೆಯು ಅವನ ಕೈಯಲ್ಲಿತ್ತು; ಮತ್ತು ಅವನು ಫಿಲಿಷ್ಟಿಯನನ್ನು ಸಮೀಪಿ ಸಿದನು. ಇತ್ತ ಫಿಲಿಷ್ಟಿಯನು ದಾವೀದನ ಸಮೀಪಕ್ಕೆ ಬಂದನು. ಗುರಾಣಿ ಹೊರುವವನು ಅವನ ಮುಂದೆ ಇದ್ದನು." ಪಶ್ಚಿಮದ ಕಡೆಯಿಂದ ಶಸ್ತ್ರಧಾರಿಯಾದ ವೀರನು ಬಂದನು, ಪರಂಪರೆಯಾಗಿದ್ದ ಅವನ ಕವಚ, ಸೂರ್ಯನ ಬೆಳಕಿನಲ್ಲಿ ಹೊಳೆ ಯುತ್ತಿದ್ದ ತಾಮ್ರದ ಶಿರಸ್ತ್ರಾಣ. ಪೂರ್ವದ ಕಡೆಯಿಂದ ಒಬ್ಬ ಕೆಂಬಣ್ಣದ ನಿಲುವಂಗಿಯಲ್ಲಿದ್ದ ಯುವಕ ತನ್ನ ಕೆರಗಳನ್ನು ಮೆಟ್ಟಿಕೊಂಡು, ಆಡಿನ ಕೂದಲಿನ ಕವಣೆಯನ್ನು ಹಿಡಿದವನಾಗಿ ಬಂದನು.[22]

ದೈತ್ಯನು ದಾವೀದನನ್ನು ನೋಡಿದಾಗ, ಅವನನ್ನು ಹಾಸ್ಯ ಮಾಡಿದನು.

> ಫಿಲಿಷ್ಟಿಯನು ಕೆಂಬಣ್ಣದವನೂ ಸುಂದರನೂ ಯೌವನಸ್ಥನೂ ಆದ ದಾವೀದನನ್ನು ನೋಡಿ ತಿರಸ್ಕಾರದಿಂದ ಅವನಿಗೆ - ನೀನು ಕೋಲು ಹಿಡಿದು ನನ್ನ ಬಳಿಗೆ ಬರುವ ದೇನು? ನಾನು ನಾಯಿಯೋ ಎಂದು ಹೇಳಿ ಅವನನ್ನು ತನ್ನ ದೇವರ ಹೆಸರಿನಲ್ಲಿ ಶಪಿಸಿದನು (17:42, 43).

ದಾಗೋನ, ಬಾಳ ಮತ್ತು ಇತರ ತನ್ನ ದೇವರುಗಳ ಹೆಸರಿನಲ್ಲಿ ಗೊಲ್ಯಾತನು ದಾವೀದ ನನ್ನು ಶಪಿಸಿದಾಗ ಒಂದು ದೊಡ್ಡ ತಪ್ಪನ್ನು ಮಾಡಿದನು. ಅವನು ಕಾಳಗವನ್ನು ಒಂದು ತತ್ವಶಾಸ್ತ್ರದ ಪಂದ್ಯವನ್ನಾಗಿ ಬದಲಾಯಿಸಿದನು! ಅದು "ದೇವರು ಮತ್ತು ದೇವರುಗಳು" ಮಧ್ಯದ ಪಂದ್ಯವಾಯಿತು.

ಗೋಲ್ಯಾತನು ದಾವೀದನನ್ನು ಬೆದರಿಸಲು ಪ್ರಯತ್ನಿಸಿದನು: "ಇಲ್ಲಿ ಬಾ; ನಿನ್ನ ಮಾಂಸವನ್ನು ಮೃಗಪಕ್ಷಿಗಳಿಗೆ ಹಂಚಿಕೊಡುತ್ತೇನೆ" ಅಂದನು (17:44).[23] ನಾವು ಎದುರಿಸುವ ಸವಾಲುಗಳಿಂದ ಭಯಪಡುತ್ತೇವೆ ಅಲ್ಲವೇ? ನಮ್ಮ ಮೊಣಕಾಲುಗಳು ಬಡಿದುಕೊಳ್ಳುವದನ್ನು ನಿಲ್ಲಿಸಿದರೆ ನಾವು ನಮ್ಮ ದೈತ್ಯರನ್ನು ಎದುರಿಸಬಹುದು.

ಈ ತಂತ್ರವು ನನ್ನಲ್ಲಿ ನಡೆಯಬಹುದಿತ್ತು. ಒಂಭತ್ತುವರೆ ಅಡಿ ಎತ್ತರದ ದೈತ್ಯನು ನನ್ನ ಮಾಂಸವನ್ನು ಪಕ್ಷಿಗಳಿಗೆ ಹಂಚಿಕೊಡುವದಾಗಿ ಹೇಳಿದ್ದರೆ ನಾನು ಭಯದಿಂದ ಸ್ತಬ್ದನಾಗುತ್ತಿದ್ದೆನು. ದಾವೀದನನ್ನು ಭಯಪಡಿಸುವ ಬದಲು, ಗೊಲ್ಯಾತನ ಬೆದರಿಸುವ ಮಾತುಗಳು, ಸತ್ಯವೇದದಲ್ಲಿನ ನಂಬಿಕೆಯನ್ನು ವ್ಯಕ್ತಪಡಿಸುವ ಮಾತುಗಳಲ್ಲಿ ಶ್ರೇಷ್ಠವಾದದ್ದನ್ನು ಹೊರಪಡಿಸಿತು.

> ಆಗ ದಾವೀದನು ಅವನಿಗೆ - "ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧ

ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು; ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದುಹಾಕಿ ಫಿಲಿಷ್ಟಿಯಸೈನ್ಯದ ಶವಗಳನ್ನು ಮೃಗಪಕ್ಷಿಗಳಿಗೆ ಹಂಚಿಕೊಡುವೆನು.[24] ಇದರಿಂದ ಇಸ್ರಾಯೇಲ್ಯ ರೊಳಗೆ ದೇವರಿರುತ್ತಾನೆಂಬದು ಭೂಲೋಕದವರಿಗೆಲ್ಲಾ ತಿಳಿದುಬರುವದು; ಯೆಹೋವನು ಈಟಿ ಕತ್ತಿಗಳಿಲ್ಲದೆ ರಕ್ಷಿಸಬಲ್ಲನೆಂದು ಇಲ್ಲಿ ಕೂಡಿರುವವರಿಗೆಲ್ಲಾ ಗೊತ್ತಾಗುವದು; ಯಾಕಂದರೆ ಯುದ್ಧ ಫಲವು ಯೆಹೋವನ ಕೈಯಲ್ಲಿದೆ; ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು ಅಂದನು" (17:45-47).

"ಯುದ್ಧ ಫಲವು ಯೆಹೋವನದೇ" ನೀವು ಇನ್ನೂ ಆ ವಾಕ್ಯಭಾಗವನ್ನು ಗುರುತಿಸಿರದಿದ್ದರೆ ಅದನ್ನು ಮಾಡಲೇಬೇಕು. ದಾವೀದನು ಒಂದು ಸರಳ ತತ್ವದ ಮೇಲೆ ಬದುಕಿದನು. ಅವನಿಗೆ ಏನನ್ನೂ ಸಾಧಿಸಿರುವದಿಲ್ಲ, ಏನನ್ನೂ ಕಳಕೊಳ್ಳು ವದಿರಲಿಲ್ಲ, ಅವನು ಯಾರನ್ನೂ ಮೆಚ್ಚಿಸುವದಿರಲಿಲ್ಲ. ಅವನು ಕೇವಲ ತನ್ನ ದೇವರ ಪರವಾಗಿ ನಿಂತುಕೊಂಡನು. ಪರಲೋಕದಲ್ಲಿ ಒಬ್ಬ ದೇವರಿದ್ದಾನೆ ಮತ್ತು ಜಯವು ಅವನದೇ ಎಂದು ಎಲ್ಲರಿಗೂ ತಿಳಿಯಬೇಕು ಎಂದು ಬಯಸಿದನು. ಜೀವನವು ನಿಮಗೆ ತರುವಂಥ ಸವಾಲುಗಳಿಗೋಸ್ಕರ ನೀವು ಸಿದ್ಧರಾಗಬೇಕೆಂದು ನಾನು ನಿಮಗೆ ಮೊದಲೇ ಸೂಚಿಸಿದ್ದೆನು.

ನಿಮ್ಮ ಜೀವನದ ಒಂದು ಗಳಿಗೆಯಲ್ಲಿ, ನೀವು ಒಂದು ಮೂಲೆಯನ್ನು ತಿರುಗಿದಾಗ ಒಂದು ಬಹು ದೊಡ್ಡದಾದ, ಬಹು ಬೃಹದಾಕಾರದ ದೈತ್ಯನನ್ನು ಎದುರಿಸುವಿರಿ, ಆಗ ನಿಮ್ಮ ಎಲ್ಲಾ ತರಬೇತಿಯಲ್ಲಿ ಕೊರತೆ ಕಾಣುವದು ಮತ್ತು ನಿಮ್ಮ ಆಯುಧಗಳು ಅಲ್ಪವೆಂದೆಣಿಸುವವು. ಆಗ ಇದನ್ನು ನೆನಪಿಡುವದು ಬಹು ಪ್ರಾಮುಖ್ಯವಾಗುವದು. "ಯುದ್ಧ ಫಲವು ಯೆಹೋವನದೇ!" ಅಂತ್ಯದಲ್ಲಿ ವಿಶ್ವಾಸದ ಜೀವನವನ್ನು ಜೀವಿಸಬೇಕಾದರೆ ಭರವಸೆ ಮಾತ್ರ ಬೇಕು - ದೇವರಲ್ಲಿ ಭರವಸೆ. ನಾವು "ನಂಬಿಕೆಯೇ ಜಯ"[25] ಎಂದು *ಹಾಡುತ್ತೇವೆ;* ದಾವೀದನು ಅದನ್ನು ಜೀವಿಸಿದನು.

## VI. ನಿಮ್ಮ ಎದುರು ದೈತ್ಯನಿದ್ದರೆ, ಅದನ್ನು ಒಮ್ಮೆಲೆ ಎದುರಿಸಿರಿ (17:48-51)

ದಾವೀದನು ತನ್ನ ಐದು ನುಣುಪಾದ ಕಲ್ಲುಗಳನ್ನು ಆರಿಸಿಕೊಂಡ ಮೇಲೆ, ಹಿಂದೆ ಮುಂದೆ ನೋಡಲಿಲ್ಲ; ಅವನು ಗೊಲ್ಯಾತನನ್ನು ಎದುರಿಸಲು ಓಡಿದನು.

ಕೂಡಲೇ ಆ ಫಿಲಿಷ್ಟಿಯನು ಹೊರಟು ದಾವೀದನೊಡನೆ ಯುದ್ಧಮಾಡುವದಕ್ಕೆ ಸಮೀಪಿಸಿದಾಗ ದಾವೀದನು ಫಿಲಿಷ್ಟಿಯ ಸೈನ್ಯದ ಕಡೆಗೆ ಓಡಿಹೋಗಿ ಆ ಫಿಲಿಷ್ಟಿಯನನ್ನು ಸಂಧಿಸಿ ಕೈಯನ್ನು ಚೀಲದಲ್ಲಿ ಹಾಕಿ ಒಂದು ಕಲ್ಲನ್ನು ತೆಗೆದು ಅವನ ಹಣೆಗೆ ಗುರಿಯಿಟ್ಟು ಕವಣೆಯನ್ನು ಬೀಸಿ ಹೊಡೆಯಲು ಕಲ್ಲು ಅವನ ಹಣೆಯೊಳಗೆ ಹೊಕ್ಕಿತು; ಅವನು ಬೋರಲಬಿದ್ದನು (17:48, 49).

ದಾವೀದನು ತನ್ನ ಚಿಕ್ಕ ಕುರುಬನ ಚೀಲದೊಳಗೆ ಕೈ ಹಾಕಿ, ಒಂದು ದೊಡ್ಡ ಕಲ್ಲಿಗಾಗಿ ಹುಡುಕಿದನು, ಅದನ್ನು ಹೊರ ತೆಗೆದು, ಚರ್ಮದ ಚೀಲದಲ್ಲಿ ಇಟ್ಟು ತನ್ನ ತಲೆಯ ಮೇಲೆ ಕವಣೆಯನ್ನು ತಿರುಗಿಸಿದನು. ಕವಣೆಯು ಮೊದಲು ಜೇಂಕರಿಸುವ ಶಬ್ದ ಮಾಡತೊಡಗಿತ್ತು ನಂತರ ಅಬ್ಬರಿಸುವ ಶಬ್ದ. ನಂತರ ಟ್ವಾಂಗ್! - ದಾವೀದನು ಕಲ್ಲನ್ನು ಬಿಟ್ಟುಬಿಟ್ಟನು. ಅದು ಗಾಳಿಯಲ್ಲಿ ತೂರಿ ಹೋಯಿತು ಮತ್ತು ಗೊಲ್ಯಾತನ ಹಣೆಯೊಳಗೆ ಸಿಕ್ಕಿಕೊಂಡಿತು. ಗೊಲ್ಯಾತನು ಗುಂಡುಬಡಿದವರಂತೆ ಬಿದ್ದನು. ಆ ದೈತ್ಯನು ದೊಡ್ಡ ಶಬ್ದದಿಂದ ಭೂಮಿಗೆ ಬಿದ್ದಾಗ, ಭೂಮಿಯು ನಡುಗಿತು.

ದಾವೀದನ ಕೆಲಸವು ಇನ್ನೂ ತೀರಲಿಲ್ಲ. ದೈತ್ಯನು ಕೇವಲ ದಂಗು ಬಡಿದಿರಬಹುದು. ದಾವೀದನು ಮತ್ತೆ *ಓಡಿದನು* (17:51). ಅವನು ಬಿದ್ದಿರುವ ದೇಹದ ಕಡೆಗೆ ಓಡಿದನು. ಅವನ ಕೈಯಲ್ಲಿ ಕತ್ತಿ ಇರಲಿಲ್ಲ.[26] ಆದುದರಿಂದ ಅವನು ಗೊಲ್ಯಾತನದನ್ನು ತೆಗೆದುಕೊಂಡನು. ("ನಾನು ನಿನ್ನ ತಲೆಯನ್ನು ಕಡಿದುಹಾಕಲು ನಿನ್ನ ಕತ್ತಿಯನ್ನು ತೆಗೆದುಕೊಳ್ಳಬಹುದೋ? ವಂದನೆಗಳು.") ಒಂದು ಬಲವಾದ ಹೊಡೆತ "ವ್ಹಾಕ್!" ಭಯಾನಕವಾದ ಕೆಲಸವು ಮುಗಿದುಹೋಯಿತು.

ಅಂತ್ಯದಲ್ಲಿ ಜಯವು ಅಳತೆ ಅಥವಾ ದೈಹಿಕ ಬಲದ ಮೇಲೆ ಆಧಾರಗೊಳ್ಳುವದಿಲ್ಲ, ಬದಲಾಗಿ ದೇವರೊಂದಿಗಿನ ನಮ್ಮ ಸಂಬಂಧದ ಮೇಲೆ ಎಂದು ಈ ನಾಟಕೀಯವಾದ ಜಯವು ನಮಗೆ ನಾವು ಎಂದಿಗೂ ಅದನ್ನು ಮರೆಯದಿರೋಣ! ನಿಮಗೆ ಒಂದು ದೈತ್ಯನಿದ್ದರೆ ಅದನ್ನು ಎದುರಿಸುವದನ್ನು ಮುಂದೂಡ ಬೇಡಿರಿ ಎಂದು ಈ ಜಯವು ಕಲಿಸುತ್ತದೆ. ಪ್ರತಿ ದಿನ ನೀವು ನಿಮ್ಮ ಸವಾಲನ್ನು ಎದರಿಸುವದನ್ನು ಮುಂದೂಡಿದರೆ, ಆ ದೈತ್ಯನು ಇನ್ನೂ ಮೂರು ಅಡಿ ಬೆಳೆದು ಬಿಡುತ್ತಾನೆ! ಪ್ರತಿ ದಿನ ಕಳೆದಂತೆ, ಆ ಕಷ್ಟವನ್ನು ಪರಿಹರಿಸುವದು ಕಷ್ಟಕರ ವಾಗುತ್ತದೆ! ದೇವರ ಸಹಾಯದಿಂದ ನಿಮ್ಮ ದೈತ್ಯರನ್ನು ಎದುರಿಸಿರಿ - ಮತ್ತು ಅವುಗಳನ್ನು ಒಂದೇ ಬಾರಿ ಎದುರಿಸಿರಿ!

## VII. ಒಂದು ಜಯವು ಇನ್ನೊಂದು ಜಯಕ್ಕೆ ಸಿದ್ಧಗೊಳಿಸುತ್ತದೆ (17:51-54)

ದಾವೀದನ ಜೀವಿತದ ಉದ್ದಕ್ಕೂ, ಒಂದು ಜಯವು ಇನ್ನೊಂದಕ್ಕೆ ಸಿದ್ಧಗೊಳಿಸಿತು. ಸಿಂಹ ಮತ್ತು ಕರಡಿಗಳ ಮೇಲಿನ ಜಯವು ಈ ಗಳಿಗೆಗಾಗಿ ಸಿದ್ಧಗೊಳಿಸಿದವು. ಈ ಜಯವು ಅವನನ್ನು ಇನ್ನಿತರ ಜಯಕ್ಕೆ ಸಿದ್ಧಗೊಳಿಸುತ್ತಿತ್ತು. ಮೊದಲನೇಯದಾಗಿ, ದಾವೀದನ ಜಯವು ಇಸ್ರಾಯೇಲ್ ಸೇನೆಗೆ ಸಹಾಯವಾಯಿತು. ಲಿನ ಆಂಡರ್ಸನ್ ಅವರು ಹೇಳುವದು ನನಗೆ ಬಹಳ ಇಷ್ಟವಾಗುತ್ತದೆ: "ದಾವೀದನ ಕಾರ್ಯವು ಧೈರ್ಯದಾಯಕ ಮಾತ್ರವಾಗಿರಲಿಲ್ಲ; ಅದು *ಸಾಂಕ್ರಮಿಕವಾಗಿತ್ತು.*"[27]

ಗೊಲ್ಯಾತನನ್ನು ಕೊಂದ ಮೇಲೆ, ಅಲ್ಲಿನ ದೃಷ್ಯವನ್ನು ನಾನು ಆಲೋಚಿಸಬಲ್ಲೆನು. ಅವನು ಫಿಲಿಷ್ಟಿಯರ ಸೇನೆಯನ್ನು ನೋಡಿದನು; ಅವರು ಅಲ್ಲಿ ನಿಂತಿದ್ದರು, ಕಣ್ಣು ದೊಡ್ಡದಾಗಿ ಮತ್ತು ಬಾಯಿ ತೆರೆದುಕೊಂಡು ದಾವೀದನು ಇನ್ನೊಂದು ಕಲ್ಲನ್ನು ಹೊರತೆಗೆದು, ತನ್ನ ಕೈಯಲ್ಲಿ ತೂರಿ ಹೀಗೆ ಕೂಗಿರಬಹುದು, "ಇನ್ನೂ ದೈತ್ಯರು ನಿಮ್ಮಲಿದ್ದಾರೋ?[28] ನನ್ನಲ್ಲಿ ಇನ್ನೂ ನಾಲ್ಕು ಕಲ್ಲುಗಳು ಉಳಿದಿವೆ!" ವಾಕ್ಯಭಾಗವು ಹೀಗೆ ಹೇಳುತ್ತದೆ, ಫಿಲಿಷ್ಟಿಯರು ತಮ್ಮ ರಣವೀರನು ಸತ್ತು ಹೋದದ್ದನ್ನು ಕಂಡು ಓಡಿಹೋದರು (17:51ಬಿ).[29] ನಂತರ ಅಲ್ಲಿಯವರೆಗೆ ಭಯದಿಂದ ಇದ್ದ ಇಸ್ರಾಯೇಲ್ಯರು, ಬೆಟ್ಟದ ಬದಿಯಿಂದ, ಕೂಗುತ್ತಾ ಓಡಿಬಂದರು, "ನನಗೊಬ್ಬ ದೈತ್ಯನನ್ನು ಕೊಡು! ನನಗೂ ಒಬ್ಬನು ಬೇಕು!" "ಇಸ್ರಾಯೇಲ್ಯರೂ ಯೆಹೂದ್ಯರೂ ಎದ್ದು ಆರ್ಭಟಿಸಿ ಫಿಲಿಷ್ಟಿಯರನ್ನು ತಗ್ಗಿನ ದಾರಿಯವರೆಗೂ ಎಕ್ರೋನಿನ ಬಾಗಲುಗಳವರೆಗೂ ಹಿಂದಟ್ಟಿದರು" (17:52ಎ). ದಾವೀದನ ಉದಾಹರಣೆಯು ಅವನ ಸಹ ಇಸ್ರಾಯೇಲ್ಯರನ್ನು ಉತ್ತೇಜಿಸಿತು.

ದಾವೀದನ ಜಯವು ದಾವೀದನನ್ನು ಮುಂದಿನ ಎಲ್ಲಾ ಯುದ್ಧಗಳಲ್ಲಿ ಉತ್ತೇಜನ ಕೊಟ್ಟಿತು. ವಚನ 54, "ದಾವೀದನು ಆ ಫಿಲಿಷ್ಟಿಯನ ತಲೆಯನ್ನು ಯೆರೂಸಲೇಮಿಗೆ ಒಯ್ದನು; ಅವನ ಆಯುಧಗಳನ್ನು ತನ್ನ ಗುಡಾರದಲ್ಲಿಟ್ಟುಕೊಂಡನು." ಗೊಲ್ಯಾತನ ತಲೆಯು ಯೆರೂಸಲೇಮಿನಲ್ಲಿ ಬಂದಿತು.[30] (ಅವನ ತಲೆಯನ್ನು ತನ್ನ ಮನೆಗೆ ಯಾಕೆ ತರಲಿಲ್ಲ? ಅವನ ತಾಯಿಯು ಮನೆಯಲ್ಲಿ ಅದನ್ನು ಇಡುವದಕ್ಕೆ ಒಪ್ಪಿರಲಿಕ್ಕಿಲ್ಲವೆಂದು ಯೋಚಿಸುತ್ತೇನೆ!) ಗೊಲ್ಯಾತನ ಆಯುಧಗಳನ್ನು ಮಾತ್ರ[31] ದಾವೀದನು ತನ್ನ ಮನೆಗೆ ಕೊಂಡು ಹೋದನು. ದಾವೀದನು ತನ್ನ ಹಾಸಿಗೆಗೆ ಪ್ರತಿ ರಾತ್ರಿ ತೆರಳುವಾಗ, ಆ ಆಯುಧಗಳನ್ನು ನೋಡಿ, "ದೇವರು ನನಗೆ ಜಯವನ್ನು ಕೊಟ್ಟನು. ಯುದ್ಧವು ಯೆಹೋವನದೇ!" ಬೆಳಗ್ಗೆ

ಮತ್ತು ಸಾಯಂಕಾಲ, ಪ್ರತಿ ನಿತ್ಯವೂ, ದೇವರೊಂದಿಗೆ ನೀವು ಇರುವಾಗ ಜಯ ನಿಮ್ಮದು ಎಂಬ ನೆನಪು ಅವನಿಗಾಗುತ್ತಿತ್ತು.

ಪ್ರತಿ ಬಾರಿ ದೇವರು ನಿಮಗೆ ಜಯವನ್ನು ಕೊಡುವಾಗ, ನಿಮ್ಮ ಹೃದಯದ ಮೇಲೆ ಅದರ ವಿವರಣೆಯನ್ನು ಕೆತ್ತಿರಿ. ದೇವರು ಒಂದು ಜಯವನ್ನೂ ಹಾಳುಮಾಡಿಕೊಳ್ಳಲು ಇಷ್ಟಪಡುವದಿಲ್ಲ. "ಅದನ್ನು ಮರೆಯಬೇಡಿರಿ!" ನಿಮ್ಮ ಮುಂದಿನ ಯುದ್ಧಗಳಲ್ಲಿ ಬೇರೆ ಯಾವದೂ ನಿಮಗೆ ಹೆಚ್ಚಿನ ಬಲ ಕೊಡಲಾದು!

## ಮುಕ್ತಾಯ

"ಪರಲೋಕದಲ್ಲಿರುವ ನಮ್ಮ ತಂದೆಯೇ, ಅನೇಕರು ಅನೇಕ ಕಷ್ಟಗಳಿಂದ ಬಳಲುತ್ತಿದ್ದಾರೆ - ಅನೇಕ ವೇಳೆ ಈ ಕಷ್ಟಗಳು ಬಹು ದೊಡ್ಡದೆಂದು ತೋರುತ್ತವೆ. ನೀನು ಪ್ರತಿಯೊಬ್ಬರೊಡನೆಯೂ ಇದ್ದು ಅವರನ್ನು ಬಲಪಡಿಸೆಂದು ಪ್ರಾರ್ಥಿಸುತ್ತೇವೆ. ಜೀವನವು ನಮ್ಮೆದುರು ತರುವಂಥ ಸಂಗತಿಗಳಿಗಾಗಿ ನಾವು ನಮ್ಮಿಂದಾಗುವಷ್ಟು ಉತ್ತಮವಾಗಿ ಸಿದ್ಧರಾಗುವಂತೆ ಸಹಾಯ ಮಾಡು. ಆದರೆ ಅಂತ್ಯದಲ್ಲಿ, ಜಯವು ನಮ್ಮದಾಗುವಂತೆ ನಿನ್ನ ಮೇಲೆ ಅವಲಂಬಿಸಲು ಕಲಿಸು. ನೀನು ನಮ್ಮ ಸಂಗಡವಿದ್ದರೇ, ಯಾವದೂ ಅಸಾಧ್ಯವಲ್ಲವೆಂದು ಕಲಿಯುವಂತೆ ಸಹಾಯ ಮಾಡು. ಪ್ರತಿಯೊಬ್ಬರನ್ನೂ ವಿಶೇಷವಾದ ರೀತಿಯಿಂದ ಆಶೀರ್ವಾದಿಸು. ಯೇಸುವಿನ ನಾಮದಲ್ಲಿ ಆಮೇನ್."

ದೈತ್ಯರೊಂದಿಗೆ ಹೋರಾಡುವದು ಒಂಟಿತನ ತರುವ ಕಾರ್ಯವಾಗಿದೆ. ದಾವೀದನು ರಣರಂಗದಲ್ಲಿ ಕಾಲಿಟ್ಟಾಗ, ಸೌಲ ಮತ್ತು ಸೇನೆಯು ಅವನ ಜೊತೆಗಿರಲಿಲ್ಲ. ಅವನು ಒಬ್ಬೊಂಟಿಗನಾಗಿದ್ದನು - ಅವನ ದೇವರನ್ನು ಹೊರತುಪಡಿಸಿ. ದೈತ್ಯರನ್ನು ಎದುರಿಸಲು ನಿಮಗೆ ದೇವರು ಬೇಕು!

---

ಟಿಪ್ಪಣಿಗಳು

[1]ಈ ಪ್ರಸಂಗದಲ್ಲಿನ ಹೆಚ್ಚಾದ ವಿಷಯವು ಇನ್ನೂ ಅನೇಕ ಮೂಲಗಳಲ್ಲಿ ತೋರಿಬಂದಿದೆ. ನಾನು ಮೂಲವೆಂದು ಗೌರವ ತೆಗೆದುಕೊಳ್ಳಲಾರೆ. [2]ಫಿಲಿಷ್ಟಿಯರೊಂದಿಗಿನ ಯುದ್ಧವು ನಿರಂತರವಾದದ್ದು (1 ಸಮುವೇಲ 14:52 ನೋಡಿರಿ). ಮಿಕ್ಮಾಶಿನಲ್ಲಿ ಫಿಲಿಷ್ಟಿಯರನ್ನು ಸೌಲನು ಸೋಲಿಸಿ ಸುಮಾರು ಇಪ್ಪತ್ತೇಳು ವರ್ಷಗಳು ಗತಿಸಿದ್ದವು. [3]ಏಲಾ ತಗ್ಗು, ಯೆಹೂದದ ಉತ್ತರ ಪಶ್ಚಿಮ ದಿಕ್ಕಿನಲ್ಲಿತ್ತು. ಫಿಲಿಷ್ಟಿಯದ ಸಮಪ್ರದೇಶದಿಂದ ಯೆಹೂದದ ಎತ್ತರ ಪ್ರದೇಶದ ವರೆಗೆ ಅದು ಪ್ರಮುಖವಾದ ಮಾರ್ಗವಾಗಿತ್ತು. [4]ಒಂದು "ಮೊಳ" ಅಂದರೆ ಮೊಣಕೈಯಿಂದ ಮಧ್ಯದ ಬೆರಳಿನ ತುದಿಯವರೆಗೆ, ಸುಮಾರು ಹದಿನೆಂಟು ಅಂಗುಲ. ಒಂದು ಗೇಣು ಅಂದರೆ ಅಂಗೈಯಗಲ, ಸುಮಾರು ಐದು ಅಂಗುಲ. ಒಂದು ಇರುವ ಬಾಸ್ಕೆಟ್ ಬಾಲ್ ಆಟಗಾರರು ಏಳು ಅಡಿಗಿಂತ ಸ್ವಲ್ಪ ಎತ್ತರವಿರುತ್ತಾರೆ. ಇಂದು ಜೀವಿಸುವ ಅತಿ ಎತ್ತರದ ಮನುಷ್ಯನು ಎಂಟು ಅಡಿಗಿಂತ ಸ್ವಲ್ಪ ಎತ್ತರವಾಗಿದ್ದಾನೆ. ಗೊಲ್ಯಾತನು ಬಹು ಎತ್ತರದ ವ್ಯಕ್ತಿಯಾಗಿದ್ದನು! ಫಿಲಿಷ್ಟಿಯರು ವಾಸಿಸುತ್ತಿದ್ದ ಪ್ರವೇಶದಲ್ಲಿ ಇಷ್ಟು ದೊಡ್ಡ ಆಸ್ತಿ ಪಂಜರವನ್ನು ಪ್ರಾಕ್ತನಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ. [5]ಅವನು ಎರಡು ನೂರು ಪೌಂಡ್ ತೂಕಕ್ಕಿಂತ ಹೆಚ್ಚು ತೂಕದ ಯುದ್ಧ ಸಾಮಾಗ್ರಿ ಮತ್ತು ಆಯುಧಗಳನ್ನು ಹೊತ್ತಿದ್ದರಿಂದ ಇದು ಅಸಮಂಜಸವಲ್ಲ. [6]ಅವನು ಕಾಲಿಗೆ ತಾಮ್ರದ ಪಾದರಕ್ಷೆಗಳನ್ನು ತೊಟ್ಟುಕೊಂಡಿದ್ದನು (17:6); ಅದು ಅವನ ಮೊಣಕಾಲು ಕಾಯುತ್ತಿತ್ತು. [7]ಚರ್ಮದಿಂದ ಮಾಡಲ್ಪಟ್ಟ ವಿಶೇಷವಾದ ದೇಹದ ಕವಚ. ನಂತರ ಆ ಚರ್ಮಕ್ಕೆ ಪದರು ಪದರಾಗಿ ಲೋಹದ ಬಿಲ್ಲೆಗಳನ್ನು ಜೋಡಿಸಲಾಗುತ್ತಿತ್ತು. ಈ ಕವಚವು ಮೊಣಕಾಲುಗಳವರೆಗೆ ಬರುತ್ತಿತ್ತು. [8]ವಿವಿಧ ದೇಶಗಳ ತೂಕವು ಬೇರೆ ಬೇರೆಯಾಗಿದ್ದುದರಿಂದ, ತಾಮ್ರದ ಐದು ಸಾವಿರ ರೂಪಾಯಿ (17:5) ಎಷ್ಟು ತೂಕದ್ದಾಗಿತ್ತು ಎಂದು ಹೇಳಲು ಸಾಧ್ಯವಿಲ್ಲ. ಕೆಲವರ ಪ್ರಕಾರ ತೂಕವು ಸುಮಾರು ಎರಡು ನೂರು ಪೌಂಡ್ ತೂಕವಾಗಿತ್ತು. [9]ಅಡಿ ಟಿಪ್ಪಣಿನ್ನು 8 ನೋಡಿರಿ. ಇದು ಆರು ನೂರು ರೂಪಾಯಿ ತೂಕದ ಕಬ್ಬಿಣ ಎಷ್ಟು ತೂಕದ್ದು ಎನ್ನುವದಕ್ಕೆ ಅಂದಾಜು (17:7). ಕೆಲವರ ಪ್ರಕಾರ ಇಪ್ಪತ್ತೈದು

ಪೌಂಡ್ ತೂಕವಿರಬಹುದು. [10]ಕೆಲವು ಲೇಖಕರು ಅವನ ವಯಸ್ಸನ್ನು ಇಪ್ಪತ್ತರ ಪ್ರಾರಂಭದಲ್ಲಿರಬಹುದೆಂದು ಹೇಳುತ್ತಾರೆ.

[11]ಸೌಲನು ತನ್ನ ಕುರೂಪಿಯಾದ ಮಗಳನ್ನು ದೂರ ಮಾಡಬೇಕೆಂದಿರಲಿಲ್ಲ! ಇದು ಶೋಧನೆಯನ್ನುಂಟು ಮಾಡುವ ಬಹುಮಾನವಾಗಿತ್ತು. ಅರಸನ ಮಗಳನ್ನು ಮದುವೆ ಮಾಡಿಕೊಂಡರೆ ಅವನು ರಾಜವಂಶಕ್ಕೆ ಸೇರಿದವನಾದನು. [12]*The Berkeley Version in Modern English* (Grand Rapids, Mich.: Zondervan, 1960) has "Why have you *really* come?" (Emphasis mine.) [13]ಇದನ್ನು ನಾವು ಸಭೆಯಲ್ಲಿ ಕಲಿಯಬೇಕಾಗಿದೆ. ಕೆಟ್ಟತನದ ದೈತ್ಯರ ಕಡೆ ನಾವು ಗಮನಹರಿಸಬೇಕಾದ ಸಮಯದಲ್ಲಿ, ನಾವು ನಮ್ಮ ನಮ್ಮೊಳಗೆ ಜಗಳ ಮಾಡಿಕೊಳ್ಳುತ್ತೇವೆ! [14]ಈ ಅಧ್ಯಾಯನವು 1 ಸಮುವೇಲ 16:7ರ ಸತ್ಯವನ್ನು ನರೂಪಿಸುತ್ತದೆ. [15]C. H. Spurgeon, *The Treasury of the Bible,* vol. 1 (Grand Rapids, Mich.: Zondervan, 1968), 660. [16]ಕೆಲವರು ಸೂಚಿಸುವಂತೆ ಸೌಲನಿಗೆ ದಾವೀದನು ಮುಂದಿನ ಅರಸನಾಗಿ ಅಭಿಷೇಕಿ ಸಲ್ಪಟ್ಟಿದ್ದಾನೆ ಎಂದು ಮೊದಲೇ ತಿಳಿದಿತ್ತು - ಮತ್ತು ಅವನು ಕೊಲ್ಲಲ್ಪಡುವಂತೆ ದೈತ್ಯನೊಡನೆ ಹೋರಾಡಲು ಸೌಲನು ಅನುಮತಿ ಕೊಟ್ಟನು. ನನ್ನ ಪ್ರಕಾರ, ಸೌಲನ ಮುಂದಿನ ಕಾರ್ಯಗಳು ಈ ಉದ್ದೇಶಕ್ಕೆ ಹೊರತಾಗಿವೆ. ಇನ್ನೊಂದು ಸೂಚನೆಯ ಪ್ರಕಾರ, ಸೌಲನು ದಾವೀದನಿಗೆ ಗೆಲ್ಲುವ ಯಾವ ಅವಕಾಶವಿಲ್ಲವೆಂದು ಸೌಲನು ಒಪ್ಪಿದನು. "ಆಯ್ತು, ಆಯ್ತು, ನೀನು ಒಂದ ಬಾರಿ ಪ್ರಯತ್ನಿಸು." [17]ಸೌಲನು ಶಸ್ತ್ರಾಸ್ತ್ರಗಳನ್ನು ದಾವೀದನಿಗೆ ತೊಡಸಿದ್ದಕ್ಕೆ ಕಾರಣ, ಅವನನ್ನು ಅಧೈರ್ಯಗೊಳಿಸಲು ತನ್ನ ಸಂರಕ್ಷಣೆಗೆ ಬೇಕಾದದ್ದನ್ನು ಧರಿಸಲು ಆಗದವನು ಯುದ್ಧ ಹೇಗೆ ಮಾಡಬಲ್ಲ ಎಂದು ತೋರಿ ಸಲು. [18]1 ಸಮುವೇಲ 17:40ರಲ್ಲಿ ನಮೂದಿಸಿದ "ಕೋಲು," ಬಹುಶಃ ಅವನು ನಡೆಯುವಾಗ ಉಪಯೋಗಿಸುವ ಕೋಲಾಗಿರಬಹುದು, ಕುರುಬನ ಕೋಲು (see KJV). [19]This story was taken from Lynn Anderson, "Facing Giants" (N.P., n.d.), sound cassette. [20]ನೀರಿನ ಸೆಳೆತದ ಕಾರಣದಿಂದ ಈ ಕಲ್ಲುಗಳು ನುಣುಪಾಗಿರಲು ಸಾಧ್ಯ ಅಂಥ ಕಲ್ಲುಗ ಳನ್ನು ಖಚಿತವಾಗಿ ಎಸೆಯಬಹುದು.

[21]ಕೊಳ್ಳದಲ್ಲಿ ಹರಿಯುವ ಈ ಹಳ್ಳವು, ವರ್ಷದಲ್ಲಿ ಹೆಚ್ಚಿನ ಕಾಲ ಒಣಗಿರುತ್ತದೆ. [22]ಒಂದು ಬೃಹದಾಕಾರದ ಬಾಂಬರ್, ಒಂದು ಜೆಟ್ ವಿಮಾಣವನ್ನು ಎದುರ್ಗೊಳ್ಳಲು ಬಂದಂತಿದೆ ಎಂದು ಒಬ್ಬರು ಚಿತ್ರಿಸಿದ್ದಾರೆ. [23]ದಾವೀದನ ಶವವನ್ನು, ಹೂಣದೇ, ಯುದ್ಧದ ಬಯಲಿನಲ್ಲಿ ಕಾಡು ಪ್ರಾಣಿಗಳು ತಿನ್ನುವಂತೆ ಬಿಡುವದಾಗಿ ಗೊಲ್ಯಾತನು ಬೆದರಿಸಿದನು. [24]ಕೆಲವು ಬೋಧಕರು ಹೀಗೆ ಹೇಳುತ್ತರೆ: "ನಾನು ನಿನ್ನ ತಲೆಯನ್ನು ಇಷ್ಟು ಬೇಗನೆ ಕಡಿದು ಹಾಕುವೆನೆಂದರೆ, ನೀನು ಸೀನಿದಾಗಲೆ ನಿನಗೆ ಅದು ತಿಳಿದುಬರುವುದು!" [25]"ನಂಬಿಕೆಯಲ್ಲಿ ಜಯವಿದೆ" ಈ ಒಳ್ಳೆಯ ಹಾಡು, ಈ ಪಾಠದ ಮೊದಲು ಹಾಡಲು ಉತ್ತಮ ವಾಗಿದೆ. [26]ಫಿಲಿಷ್ಟಿಯರು ಕಬ್ಬಿಣದಿಂದ ಮಾಡಿದ ಆಯುಧವನ್ನು ಏಕ ಸೌಮ್ಯ ಮಾಡಿಕೊಂಡಿದ್ದರು (1 ಸಮುವೇಲ 13:19-22). [27]Lynn Anderson, *Finding the Heart to Go On* (San Bernardino, Calif.: Hero's Life Publishers, 1991), 44. [28]ಫಿಲಿಷ್ಟಿಯದಲ್ಲಿ ಇನ್ನೂ ಅನೇಕ ದೈತ್ಯರಿದ್ದರು (2 ಸಮುವೇಲ 21:15-22). ಇವರು ನಂತರ ಸೋಲಿಸಲ್ಪಟ್ಟರು; ಇದು ದಾವೀದನ ಪರಂಪರೆಯಿಂದ ಪ್ರಪ್ತವಾದದ್ದಾಗಿತ್ತು. (ಇಲ್ಲಿ ಗಮನಿಸಬೇಕಾದದ್ದು ಒಂದು ಸಂಗತಿಯೇನಂದರೆ, ಇನ್ನೊಬ್ಬ ದೈತ್ಯನು - ಇನ್ನೊಬ್ಬ ವ್ಯಕ್ತಿಯಿಂದ ಕೊಲ್ಲಲ್ಪಟ್ಟನು - ಅವನ ಹೆಸರು ಗೊಲ್ಯಾತ (2 ಸಮುವೇಲ 21:19). [29]ಅವರ ರಣವೀರನು ಸತ್ತು ಹೋದ ಕೂಡಲೇ, ಫಿಲಿಷ್ಟಿಯರು ಇಸ್ರಾಯೇಲ್ಯರಿಗೆ ದಾಸರಾಗ ಬೇಕಾಯಿತು. ಫಿಲಿಷ್ಟಿಯರ ಘನತೆ ಇಷ್ಟೇ ಆಗಿತ್ತು! [30]ದಾವೀದನು ಅರಸನಾಗುವದಕ್ಕಿಂತ ಮುಂಚೆ ಯೆರೂಸಲೇಮನ್ನು ಸ್ವಾಧೀನ ಪಡಿಸಿಕೊಳ್ಳಲಿಲ್ಲ (2 ಸಮುವೇಲ 5:6-10), ಗೊಲ್ಯಾತನ ತಲೆಯನ್ನು ಯೆರೂಸಲೇಮಿಗೆ ತರುವ ಸಂಗತಿಯು ಬಹುಶಃ ಕೆಲವು ವರ್ಷಗಳ ತರುವಾಯ ನಡೆಯುವದನ್ನು ನೆನೆಸಿ ಹೇಳಲಾಗಿದೆ.

[31]ಕತ್ತಿಯು ದೇವ ದರ್ಶನ ಗುಡಾರದಲ್ಲಿ ಇದದ್ದರಿಂದ (1 ಸಮುವೇಲ 21:8, 9), "ಅವನ ಗುಡಾರ" ಅಂದರೆ, ಅವನ ವೈಯಕ್ತಿತ ಗುಡಾರದ ಬದಲು ದೇವ ದರ್ಶನ ದುಡಾರವನ್ನು ಸೂಚಿಸುತ್ತದೆ ಎಂದು ಕೆಲವರು ಹೇಳುತ್ತಾರೆ. ಬಹುಶ ದಾವೀದನು ಆಯುಧಗಳನ್ನು ಮೊದಲು ತನ್ನ ಮನೆಗೆ ತೆಗೆದುಕೊಂಡು ಹೋಗಿರಬಹುದು, ನಂತರ ಎಲ್ಲಾ ಇಸ್ರಾಯೇಲ್ಯರಿಗೆ ಉತ್ತೇಜನವಾಗುವಂತೆ ಅದನ್ನು ದೇವ ದರ್ಶನ ಗುಡಾರಕ್ಕೆ ದಾನವಾಗಿ ಕೊಡುವಂತೆ ಒತ್ತಾಯಿಸಿರಬಹುದು. "ಗುಡಾರ" ಎಂಬ ಪದವನ್ನು "ಮನೆ" ಎಂದು ಅರ್ಥ ಕೊಡುವಂತೆಯೂ ಉಪಯೋಗಿ ಸಲಾಗಿದೆ (1 ಸಮುವೇಲ 13:2; ಇತ್ಯಾದಿ).